# ರಂಗ ಸ್ತುತಿ

## ಸುಪ್ರಭಾತ

**ಏಳು2 ನಿದ್ದೆಯು ಸಾಕು** **ರಾಗ: ಭೌಳಿ, ಛಾಪುತಾಳ**

ಏಳು ಏಳು ನಿದ್ದೆಯು ಸಾಕು ರಂಗನಾಥ। ತಾಳು ತಾಳೆನಲೇಕೆ ಮಾಂಗಿರಿ ನಿವಾಸ॥ಪ॥ ಜಗವ ಪೋಷಿಪ ಚಿಂತೆ ಮಿಗಿಲಾದ ದೇವಂಗೆ। ಸೊಗಸಾದ ನಿದ್ದೆಯು ಆವರಿಪುದುಂಟೆ। ನೊಗ ಜಗವ ಪೊತ್ತವನ ತಲೆಗೆ ಕೊಳಗವು ದಿಂಬೆ। ನಗೆದೋರಿ ಕಣ್ತೆರೆಯೋ ಮಾಯಕಾರಾ॥1॥ ನಿದ್ದೆ ಕೆಡಿಸಿದ ಪಾಪವಿದ್ದರೆನಗಿರಲಯ್ಯ ಸದ್ದಿಲ್ಲದಿಹುದೇ ಭಕ್ತರ್ಪಾಡಿಕುಣಿಯೇ। ಬಿದ್ದ ಮುನಿಗಾಪಾಪವಿದ್ದಿತೇ ಕರುಣಾಳು। ಎದ್ದು ಬಾಬಾರಯ್ಯ ಮಾರನಯ್ಯ॥2॥ ಸಾಲದೇ ಕಾವೇರಿ ಗೈದ ಪ್ರದಕ್ಷಿಣೆ ಸೇವೆ। ಸಾಲದೇ ಸಿರಿಗೈದ ಪಾದಸೇವೆ। ಸಾಲದೇ ದ್ವಿಜ ಹನುಮ ಶೈತ್ಯೋಪಚಾರಗಳು। ಸಾಲದೇನಯ್ಯ ಎನ್ನ ಬಿನ್ನಪದ ಗೋಳು॥3॥ ಬಲ್ಲೆ ಬಲ್ಲೆನು ನಿನ್ನ ಚಲ್ಲಾಟಗಳನೆಲ್ಲ। ಬೆಲ್ಲವನು ಕಂಡಿರುವೆ ಮುತ್ತದಿಹುದೇ। ಕಲ್ಲೆಂದು ಪೇಳ್ವ ಪಾಪಿಗಳಿಗಿಲ್ಲ ಸಿರಿನಲ್ಲ। ಮೆಲ್ಲನೇಳೇಳಯ್ಯ ಮಾಂಗಿರಿ ತುರಂಗ॥4॥

**ಏಳು2 ಹರಿಯೇ** **ರಾಗ: ಭೌಳಿ**

ಏಳು ಏಳು ಹರಿಯೇ ತುಳಸೀಯ ಗಿಡದಲ್ಲಿ ಏಳಯ್ಯ ಬೆಳಗಾದೋ॥ಪ॥ ಭಾರಿ ಸರಪಾಣಿ ಬಲಗೈಲಿ ನಿಂಬೆಹಣ್ಣು ಓಲಾಡಿ ಸಂಕ ಊದೂವಾ ಓಲಾಡಿ ಸಂಕ ಊದೂವ ರಂಗೈಗೆ ಮೇಲಾಡಿ ಬಂದ್ಳು ತುಳಸಮ್ಮ॥1॥ ಸಂಕು ನುಡಿದಾವೋ ತೆಂಕಲಾದ ಒಡೆಯನಿಗೆ ಎಣ್ಣೆ ಮಜ್ಜನದ ಒಡೆಯನಿಗೆ। ಎಣ್ಣೆ ಮಜ್ಜನವ ಒಡಯ ರಂಗೈಗೆ ಸಂಕು ನುಡಿದಾವೋ ಶನಿವಾರ॥2॥ ಎತ್ತಲಾರದ ಶಂಕು ಹೆಗಲಲ್ಲಿ ರಾಂಬಾಣ ಎತ್ತ ಹೊರಟೀರಿ ಹೊರ ಪಯಣ। ಎತ್ತ ಹೊರಟೀರಿ ಹೊರ ಪಯಣ ರಂಗಯ್ಯ ಬಡವರ ಮನೆಯ ಹರಿಸೇವೆ॥3॥ ಅಚ್ಚ ತುಳಸೀದಂಡೆ ನಿಚ್ಚ ನೀಲಿಯ ನಾಮ ಪಕ್ಷಿಯ ಮೇಲೆ ಮೆರೆಯೋನೆ। ಪಕ್ಷಿಯ ಮೇಲೆ ಮೆರೆಯೋ ರಂಗೈಗೆ ಲಕ್ಷ್ಮೀ ಆರುತಿಯ ಹಿಡಿದಾಳೋ॥3॥

**ರಂಗನಾಯಕನೇ ರಾಜೀವಲೋಚನ** **ರಾಗ: ಭೌಳಿ**

ರಂಗನಾಯಕನೇ। ರಾಜೀವಲೋಚನ। ರಮಣನೆ ಬೆಳಗಾಯಿತೇಳೆನ್ನುತ್ತಾ। ಅಂಗನೆ ಲಕ್ಷುಮಿಯು। ಪತಿಯನ್ನೆಬ್ಬಿಸಿದಳು। ಶೃಂಗಾರದಾನಿದ್ರೆ ಸಾಕೆನ್ನುತಾ॥ಪ॥ ಪಕ್ಷೀವಾಹನನೇ। ಪಕ್ಷೀರಾಜನು ಬಂದೂ। ಬಾಗಿಲಲಿ ಕಾದಿಹನು ಅಕ್ಷೀತೆರೆದೂ। ಬೇಗಈಕ್ಷೀಸೆಂದೂ। ಪಕ್ಷಿಜಾತಿಗಳೆಲ್ಲಾ। ಚಿಲಿಪಿಲಿಗುಟ್ಟಾತ್ತಾ। ಸೂಕ್ಷ್ಮದಲಿ ನಿನ್ನನೂ। ಸ್ಮರಿಸುವುವೋ ಕೃಷ್ಣಾ॥1॥ ಸನಕಸನಂದನಸನಸ್ಸು ಜಾತರೂ ಬಂದು। ವಿನಯದಿಂ। ಕರಪಿಡಿದು। ಓಲೈಪರೋ। ಘನಶುಕಸನಕ। ವ್ಯಾಸಮುನಿ ಮುಖ್ಯರು। ನೆನೆನೆನೆದು ನಿನ್ನ ಸ್ತುತಿಪರೋ ಹರಿಯೇ॥2॥ ಸುರರು ಕಿನ್ನರರು ಕಿಂಪುರುಷರು। ಉರಗರು। ಪರಿಪರಿ ವಿಧದಲ್ಲಿಸ್ತುತಿಸುವರೋ। ಅರುಣನು ಬಂದು। ಉದಯಾಚಲದಿನಿಂದು। ಕಿರಣವನು ತೋರುವನು। ಭಾಸ್ಕರನೆ ಹರಿಯೇ॥3॥ ಪದುಮನಾಭನೆ ನಿಮ್ಮ। ನಾಮಾಂಕಿತವನ್ನು। ಪದ್ಮಾಕ್ಷೀಯರು ತಮ್ಮ ಗೃಹದೊಳಗೇ। ಉದಯದೊಳೆದ್ದು।

**ಶಾಂತಾಕಾರಂ ಭುಜಗಶಯನಂ (ಶ್ರೀಮತ್ ಪಶ್ಚಿಮ ರಂಗನಾಥ ಸುಪ್ರಭಾತ)**

ಶಾಂತಾಕಾರಂ ಭುಜಗಶಯನಂ ಪದ್ಮ ನಾಭಂ' ಸುರೇಶಂ। ವಿಶ್ವಾಕಾರಂ ಗಗನ ಸದೃಶಂ ಮೇಘವರ್ಣಂ ಶುಭಾಂಗಂ। ಲಕ್ಷ್ಮೀಕಾಂತಂ ಕಮಲನಯನಂ ಯೋಗಿಹೃಧ್ಯಾನಗಮ್ಯಂ। ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಂ॥ (ವಲಚಿ) ಶ್ರೀ ವೈಕುಂಠನಿಕೇತಾನಾಖಿಲ ಜಗಸ್ಸೃಷ್ಟ್ಯಾದಿ ಲೀಲಾಪರ। ಶ್ರೀವತ್ಸಾಂಕ ಮಹಾರ್ಹ ಕೌಸ್ತುಭಮಣಿ ಪ್ರದ್ಯೋತಿತೋರಸ್ಥುಲ। ಲಕ್ಷ್ಮೀ ದಿವ್ಯವಿಲಾಸಲೋಲಸತತಂ ಭೋಗೀಂದ್ರ ಭೋಗೇಶಯ। ಶ್ರೀಮತ್ ಪಶ್ಚಿಮರಂಗನಾಥ ಭಗವನ್‌ತೇ ಸುಪ್ರಭಾತಂ ಪ್ರಭೋ॥1॥ (ಧೇನುಕ) ಸೃಷ್ಟ್ಯಾದೌ ಸಚರಾಚರಂ ಜಗದಿಂದ ಬ್ರಹ್ಮಾದಿದೇವವ್ರಜಾನ್।

ಇಂದ್ರಾದ್ಯೈ ೖಃ ಪರಿಪಾಲಯನ್ ದಿಗದಿಪೈಃ ಕ್ಷೀರಾರ್ಣವಾಭ್ಯಂತರೇ। ನಿದ್ರಾಂಯೋಗಮಯೀಂ ಶ್ರೀಯಾಸಹ ಮುದಾಸಂಭಾವ್ಯ ಶೇಷೇಸದಾ। ಶ್ರೀಮತ್ ಪಶ್ಚಿಮ ರಂಗನಾಥ ಭಗವನ್‌ತೇ ಸುಪ್ರಭಾತಂ ಪ್ರಭೋ॥2॥ ಆದೌ ಪದ್ಮ ಭುವಾರ್ಚಿತೋऽಸಿ ಪರಮೇ ಸತ್ಯಾಖ್ಯಲೋಕೇ ಭವಾನ್। ಕಾವೇರ್ಯಾ ಕಪಿಲೇನಚಾಸಿ ತಪಸಾ ಲಬ್ಧಾರ್ಚಿತಶ್ಚಾತುಲೇ॥ ಪ್ರಾಮರ್ಭೂತ ಇಹಾರ್ಚಿತೋಸ್ಯಥ ಭುವಿಃ ಶ್ರೀ ಗೌತಮೇನಾರ್ಚಿತಃ। ಶ್ರೀಮತ್ ಪಶ್ಚಿಮ ರಂಗನಾಥೇ ಭಗವನ್‌ತೇ ಸುಪ್ರಭಾತಂ ಪ್ರಭೋ॥3॥ ಕಾವೇರೀ ವಿಶದಾಂತರೀ ಪರುಚಿರೇ ತಾರಾತ್ಮಕೇ ಭಾಸ್ವರೇ। ವೇದೋಚ್ಚೈಂಗವಿರಾಜಿತೇ ಮಣಿಮಯೇ ಶ್ರೀರಂಗ ದಿವ್ಯಾಭಿದೇ॥ ಬ್ರಹ್ಮಾನಂದಮಯೇ, ವಿಮಾನಸದನೇ ಶೇಷೇ ಸಶೇಷೇಶ್ರಿಯಾ। ಶ್ರೀಮತ್ ಪಶ್ಚಿಮ ರಂಗನಾಥ ಭಗವನ್‌ತೇ ಸುಪ್ರಭಾತಂ ಪ್ರಭೋ॥4॥ ಶ್ರೀಲಕ್ಷ್ಮೀಶ ಜಗತ್ರಯೇಶ ನಿಖಿಲ ಬ್ರಹ್ಮಾಂಡಕೋಂಟೀಶತೇ। ದ್ವಾರೇ ಚಂಡಜಯಪ್ರಚಂಡವಿಜಯೈಃ ದ್ವಾರ್ಸ್ಥೈ ೖನಿಃ ರುದ್ಧಾಸ್ಥಿತಾಃ॥ ನಿತ್ಯಾಯೋಗಿವರಾಸ್ಸನಂದನ ಮುಖಾಃ ಬ್ರಹ್ಮೇಂದ್ರ ರುದ್ರಾದಯಃ। ಶ್ರೀಮತ್ ಪಶ್ಚಿಮ ರಂಗನಾಥ ಭಗವನ್‌ತೇ ಸುಪ್ರಭಾತಂ ಪ್ರಭೋ॥5॥ ಆದಿತ್ಯೋಭ್ಯುತಿತಃ ಪ್ರಫುಲ್ಲಕಮಲಾಃ ಪದ್ಮಾಕರಾಸ್ಸರ್ವತಃ। ಗಾಯಂತಿ ಭ್ರಮರಾದಿ ಶಶ್ವವಿಮಲಾಃ ಪ್ರದ್ಯೋತಿತಂಚಾಂಬರಂ। ಕೂಜಂತಃ ಶಕುನಾಃ ಕುಲಾಯ ನಿಲಯಾಸ್ಸಂಚಾರಮಾತನ್ವತೇ। ಶ್ರೀಮತ್ ಪಶ್ಚಿಮ ರಂಗನಾಥ ಭಗವನ್‌ತೇ ಸುಪ್ರಭಾತಂ ಪ್ರಭೋ॥6॥ ವೇದೈಃಬ್ರಹ್ಮಮುಖಾಃ ಸ್ತುವಂತಿ ಋಷಯೋನಾನಾಗ ಮೋಕ್ತಸ್ತವೈಃ। ದ್ವಾರ್ಸ್ಥಾಸ್ತುಂಬುರುನಾರದ ಪ್ರಭೃತಯೋ ವೀಣಾನಿನಾದೋತ್ಸುಕಾಃ। ನೃತ್ಯಂತ್ಯಪ್ಸರ ಸಶ್ಚವಾದ್ಯಕಲಯಾ ಗಂಧರ್ವಗಾನೈರ್ಯುತಾಃ। ಶ್ರೀಮತ್ ಪಶ್ಚಿಮ ರಂಗನಾಥ ಭಗವನ್‌ತೇ ಸುಪ್ರಭಾತಂ ಪ್ರಭೋ॥7॥ ಕಾವೇರೀ ಸಲಿಲಾಪ್ಲುತಾವಿರಜಸ ತ್ರೈಯೋರ್ಥಿನಸ್ಸಾದರಂ। ಸರ್ವೇಮಂಗಳವಸ್ತು ಪೂರಿತಕರಾಃ ತ್ವಾತ್ಪದ ಸೇವೋತ್ಸುಕಾಃ॥ ದ್ವಾರೇದೇವವರಾಶ್ಚತುರ್ಮುಖ ಮುಖಾಸ್ತಿಷ್ಠಂತಿತೇ ಸೂರಯಃ। ಶ್ರೀಮತ್ ಪಶ್ಚಿಮ ರಂಗನಾಥ ಭಗವನ್‌ತೇ ಸುಪ್ರಭಾತಂ ಪ್ರಭೋ॥8॥ ದೇವಾದೀನ್‌ಸಮುವಾಗತಾನ್ ಮುನಿಗಣಾನ್ ಭಕ್ತಾನಿರ್ಮಾ ಸ್ವಾತ್ರಿತಾನ್। ತ್ರಾತುಂ ಯೋಗಮಯೀಂವಿಹಾಯ ಕೃಪಾಯಾ ನಿದ್ರಾಂಭುಜಂಗೇಶಯಾ॥ ಸೌಮ್ಯೈಂದುಸುಶೀತಲೈಶ್ಚ ಕರುಣಾಪೂರ್ಣೈ ರಪಾಂಗೈಶ್ಶುಭೈಃ। ವೀಕ್ಷಸ್ವೇದಿರಿಯಾ ಸಹಾದ್ಯ ವಿಲಸತ್ಪದ್ಮಾಯ ತಾಕ್ಷ ಪ್ರಭೋ॥9॥ ಶ್ರೀಮತ್ಪಶ್ಚಿಮ ರಂಗಿಣ ಸ್ತ್ರೀ ಜಗತಾಂನಾಥಸ್ಯ ಲಕ್ಷ್ಮೀಪತೇಃ। ಪ್ರಾತರ್ಯೇಮನುಜಾಃ ಪಠಂತಿನಿಯತಂ ಪ್ರಾಭಾತಿಕಂ ಸಂಸ್ತವಂ॥ ತೇನಿರ್ಧೂಯ ಸಮಸ್ತ ಪಾಪನಿವಹಾನ್ ಆಜನ್ಮ ಕರ್ಮಾರ್ಜಿತಾನ್। ಧರ್ಮಾದೀನ್ ಪುರುಷಾರ್ಥಕೋಶನಿಚಯಾನ್ ಪ್ರಾಪ್ಸ್ಯನ್ತ್ಯಭೀಷ್ಟಾನ್ ಬಹೂನ್॥10॥

## ದೇವರನಾಮ

**ಆನೆ ಬಂತಾನೆ2 ಬಂತಮ್ಮ** **ರಾಗ: ಸಾರಂಗ, ಅಟ್ಟತಾಳ**

ಆನೆ ಬಂತಾನೆ ಬಂತಾನೆ ಬಂತಮ್ಮ। ದಾನವ ಕದಳಿಯ ಕಾನನ ಮುರಿಯುತ॥ಪ॥ ಗುಂಗುರಗುರುಳ ನೀಲಾಂಗ ಚಲ್ವಾನೆ। ಕಂಗಳಿಗ್ಗೊಳಿವ ವ್ಯಾಘ್ರಾಂಗುಳಿಯಾನೆ। ಬಂಗಾರದಣು ಘಂಟೆ ಶೃಂಗಾರದಾನೆ। ಮಂಗಳ ತಿಲಕದ ರಂಗನೆಂಬಾನೆ॥1॥ ಕೆಳದಿಗೋಪೇರೊಳು ಗೆಳೆತನ ದಾನೆ। ಸುಲಭದಿಂದೊಲಿಯುವ ಎಳೆಮರಿ ಆನೆ। ಘಳಿಲು ಘಳಿಲುರವದಿ ನಲಿದಾಡುವಾನೆ। ಮಲಿತವರೆದೆ ಮೇಲೆ ತುಳಿದಾಡುವಾನೆ॥2॥ ನಳಿನಜಭವರಿಗೆ ತಾ ಸಿಲುಕದ ಆನೆ। ಹಲವು ಕವಿಗಳಿಗೆ ನಿಲುಕದ ಆನೆ। ಒಲವಿಂದ ಭಕುತರ ಸಲಹುವ ಆನೆ। ಬಲಪ್ರಸನ್ವೇಂಕಟ ನಿಲಯನೆಂಬಾನೆ॥3॥

**ಇನ್ನೂ ದಯ ಬಾರದೆ** **ರಾಗ: ಕಲ್ಯಾಣವಸಂತ, ಆದಿತಾಳ**

ಇನ್ನೂ ದಯ ಬಾರದೆ ದಾಸನ ಮೇಲೆ॥ಪ॥ ಪನ್ನಂಗಶಯನ ಪಾಲ್ಗಡಲೊಡೆಯನೆ ರಂಗ॥ಅ.ಪ॥ ನಾನಾ ದೇಶಗಳಲ್ಲಿ ನಾನಾ ಕಾಲಗಳಲ್ಲಿ। ನಾನಾ ಯೋನಿಗಳಲ್ಲಿ ಅಳಿದು ಪುಟ್ಟಿ॥ ನಾನು ನನ್ನದು ಎಂಬ ನರಕದೊಳಗೆ ಬಿದ್ದು। ನೀನೇ ಗತಿಯೆಂದು ನಂಬಿದ ದಾಸನ ಮೇಲೆ॥1॥ ಕಾಮಾದಿ ಷಡ್ವರ್ಗ ಗಾಡಾಂಧಕಾರದಿ। ಪಾಮರನಾಗಿದ್ದ ಪಾತಕನು॥

ಶ್ರೀಮನೋಹರನೆ ಚಿತ್ತಜ ಜನಕನೆ। ನಾಮಮುದ್ರಿಕೆಯಿಂದ ನಂಬಿದ ದಾಸನ ಮೇಲೆ॥2॥ ಮಾನಸ ವಾಚ ಕಾಯದಿ ಮಾಳ್ಪ ಕರ್ಮವು। ದಾನವಾಂತಕ ನಿನ್ನಾಧೀನವಲ್ಲವೆ॥ ಏನು ಮಾಡಿದರೇನು ಪ್ರಾಣ ನಿನ್ನದು ದೇವ। ಶ್ರೀನಾಥ ಪುರದರವಿಠಲ ದಾಸನ ಮೇಲೆ॥3॥

**ಇಂದ್ರನ್ನ ರಾಜ್ಯವ ತಂದನ್ನ** **ರಾಗ: ಮೋಹನ, ಆದಿತಾಳ**

ಇಂದ್ರನ್ನ ರಾಜ್ಯವ ತಂದನ್ನ ಶುಭಗುಣ। ಸಾಂದ್ರನ್ನ ಸುರಸಭಾ ಚಂದ್ರನ್ನ। ನಂದನ್ನ ಕಂದನ್ನ। ವಂದ್ಯನ್ನ ನಿತ್ಯಾ। ನಂದನ್ನ ತುತಿಪೆ ಮುಕುಂದನ್ನ॥1॥ ಶೌರಿಯ ನೆನೆವೆನು ದಾರಿಯ ಕುಜನರ। ವೈರಿಯ ಮಂದರೋದ್ಧಾರಿಯ। ಹರಿಯ ದುರಿತ ನಿವಾರಿಯ ಸುಜನೋಪ। ಕಾರಿಯ ಮುಕುತಿಗೆ ದಾರಿಯ॥2॥ ನೀಲನ್ನ ನಿಜಜನ ಪಾಲನ್ನ ನಿರ್ಮಲ। ಶೀಲನ್ನ ಸುಚರಿತ್ರ ಜಾಲನ್ನ। ಬಾಲನ್ನ ಸಂಗೀತಲೋಲನ್ನ ತುತಿಪೆನು। ಕಾಲನರಿವಿಗೆ ಅನಾಲನ್ನ॥3॥ ಇಷ್ಟನ್ನ ದುರಿತ ಘರಟ್ಟನ್ನ ಜಗತತಿ। ಧಿಟ್ಟನ್ನ ಸತತ ಸಂತುಷ್ಟನ್ನ। ಶಿಷ್ಟನ್ನ ಶುಭಗುಣ ಪುಷ್ಟನ್ನ ತುತಿಪೆನು। ಕೃಷ್ಣನ್ನ ಶ್ರುತಿಗಿಂಬುಗೊಟ್ಟನ್ನ॥4॥ ರಂಗನ್ನ ಕರುಣಾಂತ ರಂಗನ್ನ ಖಳಕುಲ। ಭಂಗನ್ನ ನಿಜ ಜನ ಸಂಗನ್ನ। ಅಂಗನಾಜನಕ ಅನ್ನಂಗನ್ನ ನಿತ್ಯ। ಶುಭಾಂಗನ್ನ ನುತಿಪೆನುತ್ತುಂಗನ್ನ॥5॥

**ಎನಗೂ ಆಣೆ ರಂಗ** **ರಾಗ: ಕೇದಾರ-ಆದಿತಾಳ**

ಎನಗೂ ಆಣೆ ರಂಗ ನಿನಗೂ ಆಣೆ॥ಪ॥ ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೆ॥ಅ.ಪ॥ ನಿನ್ನ ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ। ರಂಗ ಎನ್ನ ನೀ ಕೈ ಬಿಟ್ಟು ಪೋದರೆ ನಿನಗೆ ಆಣೆ॥1॥ ತನುಮನಧನದಲಿ ವಂಚಕನಾದರೆ ಎನಗೆ ಆಣೆ। ರಂಗ ಮನಸು ನಿನ್ನಲಿ ನಿಲಿಸದಿದ್ದರೆ ನಿನಗೆ ಆಣೆ॥2॥ಕಾಕು ಮನುಜರ ಸಂಗವ ಮಾಡಿದರೆನಗೆ ಆಣೆ। ರಂಗ ಲೌಕಿಕವ ಬಿಡಿಸದಿದ್ದರೆ ನಿನಗೆ ಆಣೆ॥3॥ ಶಿಷ್ಟರ ಸಂಗವ ಮಾಡದಿದ್ದರೆ ಎನಗೆ ಆಣೆ। ರಂಗ ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೆ॥4॥ ಹರಿ ನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ ರಂಗ। ಪುರಂದರವಿಠಲ ನೀನೊಲಿಯದಿದ್ದರೆ ನಿನಗೆ ಆಣೆ॥5॥

**ಎಲ್ಲಾಡಿ ಬಂದೆ ಎನ್ನ ರಂಗಯ್ಯ** **ರಾಗ: ಕಾಪಿ**

ಎಲ್ಲಾಡಿ ಬಂದೆ ಎನ್ನ ರಂಗಯ್ಯ ಪುಲ್ಲನಾಭನೆ। ನಿನ್ನ ಎಲ್ಲೆಲ್ಲರಸಿ ಬಂದೆ॥ಪ॥ ಆಲಯದೊಳಗೆ ನೀನಾಡದೆ। ಚಿನ್ನಿ ಪಾಲುಸಕ್ಕರೆ ನೀ ಮೆಲ್ಲದೆ। ಪುಟ್ಟ ಬಾಲಕರೊಡನೆ ನೀನಾಡದೆ। ಕೃಷ್ಣಯ್ಯ ನೀ ಎನ್ನ ಕಣ್ಣ ಮುಂದಾಡದೇ। ಬಾಲಯ್ಯ ನೀ ಎನ್ನ ಕಣ್ಣ ಮುಂದಾಡದೆ॥1॥ ಬಟ್ಟ ಮುಖವು ಬೆವರಿಕ್ಕುತ। ಫಣೆಯಲ್ಲಿಟ್ಟ ಕಸ್ತೂರಿ ತಿಲುಕ ಜಾರುತ। ದಟ್ಟಡಿ ನಡೆಯುತ ಮೆಟ್ಟುಂಗಲಿಕ್ಕುತ॥2॥ ಅಷ್ಟದಿಕ್ಕಿಲಿ ಅರಸಿ ಕಾಣದೆ। ಬಹು ದೃಷ್ಟಿ ಕೆಟ್ಟೆನು ನಿನ್ನ ನೋಡದೆ। ನಾನೆಷ್ಟು ಹೇಳಿದ್ರು ಕೇಳಬಾರದೆ। ಪುರಂದರ ವಿಠಲ ನೀ ಎನ್ನ ಕಣ್ಣ ಮುಂದಾಡದೆ॥3॥

**ಓಡಿ ಬಾ ನಿನ್ನ ಎತ್ತಿ ಮುದ್ದಾಡುವೆ** **ರಾಗ:ಮಾಂಡ್**

ಓಡಿ ಬಾ ನಿನ್ನ ಎತ್ತಿ ಮುದ್ದಾಡುವೆ ನಾಗಶಯನ ರಂಗನೇ॥ಪ॥ ನಾಗಶಯನ ರಂಗನೆ, ನಾಗಶಯನ ರಂಗನೇ॥ಅ.ಪ.॥ ಕುಣಿಕುಣಿಯುತ ಗೆಜ್ಜೆ ಝುಣ ಝುಣರೆನ್ನೆ ಕೃಷ್ಣ ಫಣಿಶಾಯಿ ನಿನ್ನ ನಾ ಕ್ಷಣದಲ್ಲಿ ಬಿಗಿದೂ॥1॥ ಚಿನ್ನರೊಡನೆಗೂಡಿ ಮಣ್ಣನೆ ಮೆಲ್ಲದಿರೂ ಕೃಷ್ಣಾ ಅಣ್ಣಯನೊಡನಾಡೊ ಚಿನ್ನಗೋಪಾಲನೇ॥2॥ ಗೋಪಿಯ ರೊಡನಾಡಿ ಗೋಕುಲಾಂಬುಧಿ ಚಂದ್ರ। ಗೋಪಾಲಕೃಷ್ಣವಿಠಲ ಗೋವಳರೊಡೆಯ॥3॥

**ಡೀಡೀ ಆಡ್ಯಾನೆ ರಂಗ** **ರಾಗ: ಮಾಯಾಮಾಳವಗೌಳ**

ಡೀಡೀ ಆಡ್ಯಾನೆ ರಂಗ ಡೀಡೀ ಆಡ್ಯಾನೆ। ಓಡಿ ಓಡಿ ಬಂದು ಹಣೆಗೆ ನೀಡಿ ನೀನೀ ಡೀಡಿಕ್ ಎಂದು॥ಪ॥ ಮರಕತ ನವರತ್ನ ವಜ್ರ। ಹರಳು ಕೆತ್ತಿಸಿದ ದ್ಯುಮಣಿ। ಕಿರಣ ಮುಕುಟ ಧರಿಸಿದ ಶಿರದಲಿ। ಸರಿ ಸರಿ ಸರಿ ಸರಿ ಸರಿ ಸರಿದಾಡುತ್ತ॥1॥ ಚಂದ್ರಶೇಖರ ಹಂಸವಾಹನ। ಇಂದ್ರಾದ್ಯರಾಕಾಶದಲ್ಲಿ ದುಂ ದುಂ। ದುಂ ದುಂ ದುಂದುಭಿ ನುಡಿಸೆ।

ಬಂದೆ ಇಕ್ಕೋ ಬಂದೆ ಬಂದೆನುತ॥2॥ ಹಿಂತಿರುಗಿ ಪೋಗಿ ನೀನು। ಅಂತರಿಸಿ ದೂರದಲ್ಲಿ। ನಿಂತು ವಿಜಯವಿಠ್ಠಲರಾಯನು। ಇಂತಿರಿರಿರಿರಿರಿರಿ ಎಂದು॥3॥

**ತಾರಮ್ಮಯ್ಯ ಯದುಕುಲ ವಾರಿಧಿ** **ರಾಗ: ಪುನ್ನಗವರಾಳಿ, ಆದಿತಾಳ**

ತಾರಮ್ಮಯ್ಯ ಯದುಕುಲ ವಾರಿಧಿ ಚಂದ್ರಮನ॥ಪ॥ ಮಾರಜನಕನ ಮೋಹನಾಂಗನ। ಸೇರಿ ಸುಖಿಸಲು ಹಾರೈಸಿ ಬಂದೆವು॥ಅ.ಪ॥ ಬಿಲ್ಲ ಹಬ್ಬಗಳಂತೆ। ಅಲ್ಲಿ ಬೀದಿ ಶೃಂಗಾರವಂತೆ। ಮಲ್ಲರ ಕಾಳಗ ಮದ್ದಾನೆಯಂತೆ। ಫುಲ್ಲಾಕ್ಷನು ತಾನಲ್ಲಿಗೆ ತೆರಳಿದ॥1॥ ಮಧುರಾಪುರಿಯಂತೆ, ಅಲ್ಲಿ ಮಾವ ಕಂಸನಂತೆ। ಒದಗಿದ ಮದಗಜ ತುರಗ ಸಾಲಿನಲಿ। ಮದನಮೋಹನ ಕೃಷ್ಣ ಮಧುರೆಗೆ ತೆರಳಿದ॥2॥ ಅತ್ತೆ ಮಾವನ ಬಿಟ್ಟು। ಬಂದೆವು ಹಿತ್ತಲ ಬಾಗಿಲಿಂದ। ಭಕ್ತವತ್ಸಲನ ಬಹು ನಂಬಿದ್ದೆವು। ಉತ್ಸಾಹ ಭಂಗ ಮಾಡಿದನಮ್ಮ॥3॥ ರಂಗನ ನೆರೆ ನಂಬಿ ಬಂದೆವು। ಸಂಗ ಸುಖವ ಬಯಸಿ। ಭಂಗಿಸಿ ನಮ್ಮನು ಹ್ಯಾಂಗೆ ಪೋದನಮ್ಮ। ಮಂಗಳಮೂರುತಿ ಮದನ ಗೋಪಾಲನು॥4॥ ಶೇಷಗಿರಿಯ ಮೇಲೆ। ಹರಿ ತಾ ವಾಸವಾಗಿಹ ಕಾಣೆ। ಸಾಸಿರ ನಾಮದ ಒಡೆಯನೆಂದೆನಿಸಿದ। ಶ್ರೀಶ ಪುರಂದರವಿಠ್ಠಲರಾಯನ॥5॥

**ತೋರ ಬಾರದೆ ನಿಮ್ಮ ಚರಿತೆಯನು** **ರಾಗ:ಹಿಂದೋಳ**

ತೋರ ಬಾರದೆ ನಿಮ್ಮ ಚರಿತೆಯನು ನರರೊಳು ನಗೆಗೀಡು ಮಾಡದ ಹಾಗೆ॥ಪ॥ ಕಲ್ಲೊಳು ಕಾಂತೆಯ ಮಾಡಿದವರನೆಂದೆಲ್ಲರು ಜಗದೊಳು ಪೇಳುವರು। ಅಲ್ಲಿ ಮಾಡಿದ ಹಾಗೆ ಇಲ್ಲಿತೋರಿಸಿದರೆ ಬಲ್ಲಿದನೆನ್ನೊಡೆಯ ದೊಡ್ಡವನೆಂದು ಸಾರುವೆ॥1॥ ಅಹಹ ಕುಬುಜೆಯಳ ತನುವನ್ನೆತ್ತಿ। ಮಹಿಯೊಳು ಯುವತಿಯ ಮಾಡಿದೆಯೆಂಬರು ಬಹು ಪರಾಕ್ರಮವನ್ನು ಈಗತೋರಿಸಿದರೆ। ಆಹುದೋ ಎನ್ನೊಡೆಯ ದೊಡ್ಡವನೆಂದು ಸಾರುವೆ॥2॥ ನೀನೆ ಗತಿಯೆಂದು ಬಂದ ಭಕ್ತನ ಕಣ್ಮನವ ತಿದ್ದಿ ನಿಜವ ತೋರಿಸಯ್ಯ। ದೀನದಯಾಳು ಹೆಳವನಕಟ್ಟೆ ರಂಗಯ್ಯಾ ದಾನಿ ಎನ್ನೊಡೆಯ ದೊಡ್ಡವನೆಂದು ಹೊಗಳುವೆ॥3॥

**ದಯಮಾಡೊ ರಂಗ** **ರಾಗ: ಕಲ್ಯಾಣಿ**

ದಯಮಾಡೊ ರಂಗ ದಯಮಾಡೊ॥ಪ॥ ದಯಮಾಡೊ ನಿನ್ನ ದಾಸನು ನಾನೆಂದು॥ಅ.ಪ॥ ಹಲವು ಕಾಲದಿ ನಿನ್ನ ಹಂಬಲು ಎನಗೆ॥ ಒಲಿದು ಪಾಲಿಸಬೇಕು ವಾರಿಜನಾಭ॥1॥ ಇಹಪರದಲಿ ನೀನೆ ಇಂದಿರಾರಮಣ॥ ಭಯವೇಕೊ ನೀನಿರಲು ಭಕ್ತರಭಿಮಾನಿ॥2॥ ಕರಿರಾಜವರದನೆ ಕಂದರ್ಪ ಪಿತನೆ। ಪುರಂದರವಿಠಲ ಹರಿಸಾರ್ವಭೌಮ॥3॥

**ಧರೆಯೊಳಗೆ ಹೆಳವನಕಟ್ಟೆಯಲಿ ನೆಲೆಸಿ**

ಧರೆಯೊಳಗೆ ಹೆಳವನಕಟ್ಟೆಯಲಿ ನೆಲೆಸಿ। ಪರಿಪೂರ್ಣಕಳೆಯಿಂದ ಭಕುತರನು ಒಲಿಸಿ। ಸ್ಥಿರವಾಗಿ ಪೂಜೆಯನು ನೆಲಸಿ ನೀನಿಂದೆ। ಕರುಣ ದೃಷ್ಟಿಯಲಿ ಭಕ್ತರನು ಮುನ್ನಿಸುವೆ॥1॥ ಹತ್ತು ಅವತಾರದಲಿ ಇದಿರಾಂತವರ ಗೆಲಿದು। ಮತ್ತೆ ಪದವಿಯ ಕೊಟ್ಟು ರಕ್ಷಿಸಿ ಕಾಯ್ದೆ। ವಿಸ್ತರಿಸಿ ಪೂಜೆಯನು ಮಾಡಿಸಿಕೊಂಬೆ। ತೆತ್ತೀಸಕೋಟಿ ದೇವರ್ಕಳನು ರಕ್ಷಿಸಿದೆ॥2॥ ಉದಯ ಮಧ್ಯಾಹ್ನ ಸಂಜೆಯಲಿ ಪೂಜೆಯನ್ನು ವಿಧವರಿತು ಸೇವೆಯನು ಅನುಸರಿಸಿಕೊಂಬೆ ಸಹೃದಯ ಭಕ್ತರನು ಕಾಯ್ದು ಪಾಲಿಸುವೆ। ಮುದದಿಂದ ಹೆಳವನಕಟ್ಟೆಯಲಿ ನೆಲೆಸಿರುವೆ॥3॥

**ನಾ ನಿನ್ನ ಧ್ಯಾನದೊಳಿರಲು** **ರಾಗ: ಕಾನಡ, ರೂಪಕ**

ನಾ ನಿನ್ನ ಧ್ಯಾನದೊಳಿರಲು ಮಿಕ್ಕ। ಹೀನಮಾನವರೇನ ಮಾಡಬಲ್ಲರೊ ರಂಗ॥ಪ॥ ಮತ್ಸರಿಸುವರೆಲ್ಲ ಕೂಡಿ ಮಾಡುವುದೇನು। ಅಚ್ಯುತ ನಿನದೊಂದು ದಯೆಯಿರಲು॥ ವಾತ್ಸಲ್ಯ ಬಿಡದಿರು। ನಿನ್ನ ನಂಬಿದೆ ದೇವ। ಕಿಚ್ಚಿಗೆ ಇರುವೆ ಮುತ್ತುವುದೆ ಕೇಳೆಲೊ ರಂಗ॥1॥ ಧಾಳಿಲಿ ಕುದುರೆ ವೈಯಾರದಿ ಕುಣಿಯಲು। ಧೂಳು ರವಿಯ ಮೇಲೆ

ಮುಸುಕುವುದೆ। ತಾಳಿದವರಿಗೆ ವಿರುದ್ಧ ಲೋಕದೊಳುಂಟೆ। ಗಾಳಿಗೆ ಗಿರಿಯು ಅಲ್ಲಾಡ ಬಲ್ಲುದೆ ರಂಗ॥2॥ ಕನ್ನಡಿಯೊಳಗಿನ ಗಂಟು ಕಂಡು ಕಳ್ಳ। ಕನ್ನವಿಕ್ಕ ಲವನ ವಶವಹುದೆ॥ ನಿನ್ನ ನಂಬಲು ಮುದ್ದು ಪುರಂದರವಿಠ್ಠಲ। ಚಿನ್ನಕ್ಕೆ ಪುಟವನಿಟ್ಟಂತೆ ಅಹುದು ರಂಗ॥3॥

**ನಂಬಿ ಕೆಟ್ಟವರಿಲ್ಲವೋ ರಂಗಯ್ಯನ** **ರಾಗ:ಕಲ್ಯಾಣಿ**

ನಂಬಿ ಕೆಟ್ಟವರಿಲ್ಲವೋ ರಂಗಯ್ಯನ। ನಂಬದೆ ಕೆಟ್ಟರೆ ಕೆಡಲಿ॥ಪ॥ ಅಂಬುಜನಾಭನ ಅಖಿಲ ಲೋಕೇಶನ। ಕಂಬುಕಂಧರ ಕೃಷ್ಣ ಕರುಣಾಸಾಗರನ॥ಅ.ಪ॥ ತರಳ ಪ್ರಹ್ಲಾದ ಸಾಕ್ಷಿ ಸರಸಿಯೊಳಿದ್ದ। ಕರಿರಾಜನೊಬ್ಬ ಸಾಕ್ಷಿ॥1॥ ಮರಣ ಕಾಲದಿ ಅಜಾಮಿಳ ಮಗನನು ಕರೆಯ। ಗರುಡನೇರಬಂದ ಗುರುವ ರಹಿತನ॥2॥ ದೊರೆಯು ತನ್ನ ಪುತ್ರನನ್ನು ಕೊರಳ್ವಿಡಿದ್ದೊದ್ದರಡಿಸಲು॥3॥ ಅರಣ್ಯದೊಳಗವನಿದ್ದ ಸ್ಥಳದಲ್ಲಿ। ಭರದಿಂದೋಡಿ ಬಂದ ಭಕ್ತವತ್ಸಲನ್ನ॥4॥ ತರುಣಿ ದ್ರೌಪದಿ ಸೀರೆಯ-ದುಶ್ಯಾಸನ। ಸರಸರ ಸೆಳೆಯುತಿರೇ॥5॥ ಕರುಣೆ ತನ್ನೊಡತಿಯೊಡನೆ ಆಡುವುದ ಬಿಟ್ಟು। ತ್ವರದಿ ಅಕ್ಷಯವಿತ್ತ ಸಿರಿ ಕೃಷ್ಣರಾಯನ॥6॥

**ಪೋಪು ಹೋಗೋಣ ಬಾರೋ ರಂಗ** **ರಾಗ: ಶಂಕರಾಭರಣ, ಆದಿತಾಳ**

ಪೋಪು ಹೋಗೋಣ ಬಾರೋ ರಂಗ। ಪೋಪು ಹೋಗೋಣ ಬಾರೋ॥ಪ॥ ಜಾಹ್ನವಿಯ ತೀರವಂತೆ ಜನಕರಾಯನ ಕುವರಿಯಂತೆ। ಜಾನಕಿಯ ವಿವಾಹವಂತೆ ಜಾಣ ರಾಮ ಬರಬೇಕಂತೆ॥1॥ ಕುಂಡಲೀಯ ನಗರವಂತೆ ಭೀಷ್ಮಕರಾಯನ ಕುವರಿಯಂತೆ। ಶಿಶುಪಾಲನ್ನ ಒಲ್ಲಳಂತೆ ನಿನಗೆ ಓಲೆ ಬರೆದಳಂತೆ॥2॥ ಪಾಂಡವರು ಕೌರವರಿಗೆ ಲೆತ್ತವಾಡಿ ಸೋತರಂತೆ। ರಾಜ್ಯವನ್ನು ಬಿಡಬೇಕಂತೆ ರಂಗವಿಠಲ ಬರಬೇಕಂತೆ॥3॥

**ಬಂದನೇನೆ ರಂಗ ಬಂದನೇನೆ** **ರಾಗ: ಶ್ರೀ, ಆದಿತಾಳ**

ಬಂದನೇನೆ ರಂಗ ಬಂದನೇನೆ ಎನ್ನ॥ಪ॥ ತಂದೆ ಬಾಲಕೃಷ್ಣ ನವನೀತ ಚೋರ॥ಅ.ಪ॥ ಘಲು ಘಲು ಘಲುರೆಂಬ ಪೊನ್ನಂದಿಗೆ ಗೆಜ್ಜೆ। ಹೊಳೆ ಹೊಳೆ ಹೊಳೆಯುವ ಪಾದವನೂರುತ॥ ನಲಿ ನಲಿದಾಡುವ ಉಂಗುರ ಅರಳೆಲೆ। ಥಳಥಳಥಳ ಹೊಳೆಯುತ ಶ್ರೀಕೃಷ್ಣ॥1॥ ಕಿಣಿ ಕಿಣಿ ಕಿಣಿರೆಂಬ ಕರದ ಕಂಕಣ ಬಳೆ। ಝಣ ಝಣ ಝಣರೆಂಬೊ ನಡುವಿನ ಗಂಟೆ॥ ಧಣ ಧಣ ಧಣರೆಂಬ ಪಾದದ ತೊಡವಿನ ಮಿಣ ಮಿಣ ಮಿಣ ಕುಣಿದಾಡುತ ಶ್ರೀಕೃಷ್ಣ॥2॥ ಹಿಡಿ ಹಿಡಿ ಹಿಡಿಯೆಂದು ಪುರಂದರವಿಠಲನ। ದುಡುದುಡುದುಡುದುಡನೆ ಓಡುತ॥ ನಡಿ ನಡಿ ನಡಿಯೆಂದು ಮೆಲ್ಲನೆ ಪಿಡಿಯಲು। ಬಿಡಿ ಬಿಡಿ ಬಿಡಿ ದಮ್ಮಯ್ಯ ಎನ್ನುತ ಕೃಷ್ಣ॥3॥

**ಮಧುಕರ ವೃತ್ತಿ ಎನ್ನದು** **ರಾಗ: ದುರ್ಗ, ಆದಿತಾಳ**

ಮಧುಕರ ವೃತ್ತಿ ಎನ್ನದು ಅದು ಬಲು ಚೆನ್ನದು॥ಪ॥ ಪದುಮನಾಭನ ಪಾದಪದುಮ ಮಧುಪವೆಂಬ॥ಅ॥ ಕಾಲಿಗೆ ಗೆಜ್ಜೆ ಕಟ್ಟಿ ನೀಲವರ್ಣನ ಗುಣ। ಆಲಾಪಿಸುತ್ತ ಬಲು ಓಲಗ ಮಾಡುವಂಥ॥1॥ ರಂಗನಾಥನ ಗುಣ ಹಿಂಗದೆ ಪಾಡುತ್ತ। ಶೃಂಗಾರ ನೋಡುತ್ತ ಕಂಗಳಾನಂದವೆಂಬ॥2॥ ಇಂದಿರಾಪತಿ ಪುರಂದರವಿಠಲನಲ್ಲಿ। ಚೆಂದದ ಭಕ್ತಿಯಿಂದಾನಂದವ ಪಡುವಂಥ॥3॥

**ಯಾರೇನೆಂದರೋ ಹರಿ** **ರಾಗ: ಹಿಂದೋಳ, ಆದಿತಾಳ**

ಯಾರೇನೆಂದರೋ ಹರಿ ಮೂರು ಲೋಕದಿ ಮುತ್ತು ಸುರಿವೊ ರಂಗಯ್ಯ ನಿನ್ನ॥ಪ॥ ದ್ರುಪದನ ಮಗಳ ಸಲಿಗೆಯ ಧ್ವನಿಕೇಳಿ। ಬಂದು ಅಕ್ಷಯವಿತ್ತ ದ್ವಾರಕಾ ನಿವಾಸ ನಿನ್ನ॥1॥ ಸಕಲ ಭಾಗವತರು ಶೃತಿತಾಳ ಮೇಳದಿಂದ। ತಕಿಟ ತಕಿಟ ಧಿಮ್ಮಿ ಥೋಂ ಎಂದು ಕುಣಿವರು॥2॥ ಗೊಲ್ಲರ ಮನೆಯೊಳಗೆ ಬೆಣ್ಣೆ ಕದ್ದನೆಂದು। ದೂರು ಹೇಳುವರೇನೋ

ಕೃಷ್ಣ॥3॥ ಸಲ್ಲದ ಮಾತನಾಡಿ ಗುಲ್ಲು ಮಾಡುವರೇನೂ। ಫುಲ್ಲಲೋಚನ ನೀ ಸುಮ್ಮನಿರುವೆ ಏನೋ॥4॥ ಜಗದೋದ್ಧಾರನೆ ಗಿರಿಯಮೇಲೇರಿ ತಿಮ್ಮ। ಭಕುತರಿಗೊಲಿವ ನಮ್ಮ ಪುರಂದರವಿಠಲ ನಿನ್ನ॥5॥

**ಯಾರೇ ರಂಗನ** ರಾಗ: ಹಿಂದೋಳ, ಆದಿತಾಳ

ಯಾರೇ ರಂಗನ ಯಾರೇ ಕೃಷ್ಣನ। ಯಾರೇ ರಂಗಯ್ಯನ ಕರೆಯಬಂದವರು॥ಪ॥ ಗೋಪಾಲಕೃಷ್ಣನ ಪಾಪವಿನಾಶನ। ಈ ಪರಿಯಿಂದಲಿ ಕರೆಯಬಂದವರು॥1॥ ವೇಣು ವಿನೋದನ ಪ್ರಾಣಪ್ರಿಯನ। ಜಾಣೆಯರರಸನ ಕರೆಯಬಂದವರು॥2॥ ಕರಿರಾಜ ವರದನ ಪರಮಪುರುಷನ। ಪುರಂದರವಿಠಲನ ಕರೆಯಬಂದವರು॥3॥

**ರಂಗನೆಂಥವನೆಂಥವನೆ** ರಾಗ: ಪುನ್ನಾಗವರಾಳಿ

ರಂಗನೆಂಥವನೆಂಥವನೆ ತಂಗಿ ಅವನಂಗ ತಿಳಿಯದು ಬ್ರಹ್ಮಾದಿಗಳಿಗೆ॥ಪ॥ ಆಗಮವ ತಂದಿಹನೆರಂಗ ಬೇಗದಿ ಗಿರಿಯ ಪೊತ್ತಿಹನೆ॥ ಮೂಗಿಂದ ಭೂಮಿಯ ಕಿತ್ತಿಹನೆ ಕಂದ ಕೂಗಲು ಕಂಬದಿ ಬಂದ ಕಾಣಕ್ಕ॥1॥ ಧರೆಯ ಈರಡಿ ಮಾಡಿದನೆ ಭೂ। ಸುರರಿಗೆ ದಾನವ ನೀಡಿದನೆ। ನೆರೆದು ಕಪಿಹಿಂಡು ಕೂಡಿದನೆ ಫಣಿ। ಶಿರದಲ್ಲಿ ಕುಣಿಕುಣಿದಾಡಿದನಕ್ಕ॥2॥ ಉಟ್ಟಿದ್ದು ಬಿಚ್ಚಿ ತಾ ನಿಂತಿಹನೆ ರಂಗ ದಿಟ್ಟಾದ ಕುದುರೆಯನೇರಿಹನೆ। ದುಷ್ಟರನ್ನೆಲ್ಲ ಅಳಿದಿಹನೆ ನಮ್ಮ ಬಡದಾದಿ ಕೇಶವರಾಯ ಕಾಣಕ್ಕ॥3॥

**ರಂಗ ಬಾರೋ ರಂಗ** ರಾಗ : ಕಾಪಿ, ಏಕತಾಳ

ರಂಗ ಬಾರೋ ರಂಗ ಬಾರೋ ರಂಗಯ್ಯ ಬಾರೋ॥ಪ॥ ಪೊನ್ನುಂಗುರ ನಿನಗೀವೆ ಪನ್ನಗ ಶಯನನೆ ಬಾರೋ॥ಅ.ಪ॥ ವೆಂಕಟರಮಣನೆ ಬಾರೋ ಪಂಕಜ ಚರಣವ ತೋರೊ। ಮುಕುಂದ ಮುಂದೆನಿಂದಾಡೋ ಕಿಂಕಿಣಿಕಿಣಿರವದಿಂದ॥1॥ ಕರ್ಣದೊಳಿಟ್ಟ ಮಾಗಾಯಿ ಹೊನ್ನ ಕದಪಿಲಿ ಧುಮುಕಾಡುತ್ತ। ಪನ್ನಗ ಶಯನನೆ ನಿನ್ನ ಚಿನ್ನದಸರ ಹೊಳೆಯುತ್ತ ಬಾರೋ॥2॥ ಬಡನಡುವಿನ ಘಂಟೆ ಬಳುಕಿ ಢಣ ಢಣೆಸುತ್ತ। ಕಡಗ ಕಾಲಂದುಗೆ ಗೆಜ್ಜೆ ಅಡಿಗಡಿಗೆ ನುಡಿಸುತ್ತ ಬಾರೋ॥3॥ ಮುಂಗುರುಳಿನ ಸೊಬಗಿನಿಂದ ರಂಗ ನಿನ್ನ ಫಣೆಯೊಳಿಟ್ಟ। ರಂಗುಮಾಣಿಕದರಳೆಲೆ ತೂಗಿ ತೂಗಿ ಓಲಾಡುತ್ತ ಬಾರೋ॥4॥ ಕೊರಳಿಗ್ಹಾಕಿದ ಹುಲಿಯುಗುರು ತೋರಮುತ್ತಿನ ಹಾರಂಗಳ್। ಹೊಳೆಯುತ್ತ ಪರಿಪರಿ ವಿಧಗಳಿಂದ ಪುರಂದರವಿಠಲ ಬಾರೋ॥5॥

**ರಂಗ ಬಂದ ಮನೆಗೆ** ರಾಗ:ಹಿಂದೋಳ, ಝಂಪೆತಾಳ

ರಂಗ ಬಂದ ಮನೆಗೆ ಶೃಂಗಾರ ನೋಡಿರೋ। ಹಿಂಗದಂಥ ಬಡತನ ಭಂಗವಾಗಿ ಹೋಯಿತೋ॥ಪ॥ ಹೊತ್ತಾರೆದ್ದು ಹೋಗಿ ಪರರ ಭೃತ್ಯನಾಗಿ ದುಡಿದರೆ। ತುತ್ತು ಅನ್ನ ಕಾಣದೆ ನಾ ಹೊತ್ತು ಕಳೆದೆನೊ॥ ಇತ್ತಲಾಗಿ ರಂಗ ಬರಲು ಸುತ್ತಿಕೊಂಡ ಬಡತನ। ಎತ್ತಲ್ಹೋ ಯಿತೋ ಉಟ್ಟೇನೆನಲು ಏನಾಯಿತೋ। ಕಾಣಬಾರದು॥1. ಮಾನಾಭಿಮಾನವ ಬಿಟ್ಟು ನಾನಾರಣ್ಯ ತಿರುಗಿದರೆ। ಗೇಣು ಅರಿವೆ ಉಟ್ಟೇನೆನಲು ಹುಟ್ಟು ದೊರೆಯದು॥ದಾನವಾಂತಕ ರಂಗ ಬರಲು ನಾನಾಪರಿಯ ಪಟ್ಟವಾಳಿ। ತಾನೆ ಬಂದು ಮನೆಯೊಳು ನಿಧಾನವಾಯಿತೋ॥2॥ ಹುಟ್ಟಿದ್ದು ಮೊದಲು ನಾನು ಮೆಟ್ಟಿ ತುಳಿದೆ ದೇಶವೆಲ್ಲ। ಇಟ್ಟೇನೆಂದರೆಸೊಟ್ಟ ಕಿವಿಗೆ ಗಟ್ಟಿ ಮುರುವು ಕಾಣೆನೊ॥ ವಿಠಲ ಮನೆಗೆ ಬರಲು ಸೃಷ್ಟಿಯೊಳಗಿಲ್ಲದಂಥ। ಅಷ್ಟ ಸೌಭಾಗ್ಯಗಳ ಮೆಟ್ಟಿ ತುಳಿದೆನೋ॥3॥ ಹಿಂಡು ಬಂಧುಬಳಗದೊಳು ಖಂಡಮಣ್ಣು ಮಾಡಿದರೆ। ದಿಂಡೆ ಯೊಳೊಬ್ಬಳ ತಂದು ದಂಡೆ ಕಟ್ಟಿರೊ॥ ಪುಂಡರೀಕಾಕ್ಷನು ಬರಲು ಭೂಮಂಡಲದೊಳಿಲ್ಲದಂಥ ಹೆಂಡಿರ ಭೋಗಕೆ ಪ್ರಚಂಡನಾದೆನೋ॥4॥ ಹಿಂದೆ ರಂಗನ ಭಜಿಸದೆ ಅನೇಕ ಭಂಗವ ಪಟ್ಟೆ। ಮುಂದೆ ರಂಗನ ಭಜಿಸಲು ಸುಕೃತ ಫಲವು॥ ತಂದೆ ಪುರಂದರ ವಿಠಲನ್ನ ಹೊಂದಿ ಭಜಿಸಲಾಗಿ। ಬಂದನು ಭಾಗ್ಯದ ಸಿರಿಲಕುಮಿಯನೊಡಗೂಡಿ॥5॥

**ಸೆರಗ ಬಿಡೋ ರಂಗ ಸೆರಗ ಬಿಡೋ** **ರಾಗ: ದ್ವಿಜಾವಂತಿ**

ಸೆರಗ ಬಿಡೋ ರಂಗ ಸೆರಗ ಬಿಡೋ। ಕರವ ಮುಗಿವೆನೊಮ್ಮೆ ಸೆರಗ ಬಿಡೋ॥ಪ॥ ಅತ್ತೆ ಕಂಡರೆ ಎನ್ನ ಹತ್ತಿರ ಸೇರಳೋ। ಚಿತ್ತದೊಲ್ಲಭ ಎನ್ನ ಸೆರಗ ಬಿಡೋ॥1॥ ಮಾವ ಕಂಡರೆ ಎನ್ನ ಜೀವ ಬಿಡನೋ ಹರಿಯೇ। ಜೀವದೊಲ್ಲಭ ಎನ್ನ ಸೆರಗ ಬಿಡೋ॥2॥ ಗಂಡ ಕಂಡರೆ ಎನ್ನ ಗುಂಡಿಕ್ಕುವ ಹರಿ। ಪುಂಡರೀಕಾಕ್ಷ ಪುರಂದರ ವಿಠಲ ಬಿಡೋ॥3॥

## ಭಕ್ತಿಗೀತೆ

**ಆದಿರಂಗ ಕ್ಷೇತ್ರವು ಶ್ರೀರಂಗಪಟ್ಟಣವು** **ರಾಗ: ನೀಲಾಂಬರಿ**

ಆದಿರಂಗ ಕ್ಷೇತ್ರವು ಶ್ರೀರಂಗಪಟ್ಟಣವು। ಇಲ್ಲಿ ಪವಡಿಸಿರುವವನು ಶ್ರೀರಂಗನಾಥನು। ಶ್ರೀರಂಗ ಪಟ್ಟಣಕ್ಕೆ ಶ್ರೀರಕ್ಷೆಯಾಗಿ ನಿಂದು। ಆದಿಶೇಷಶಾಯಿಯಾಗಿ ನೆಲಸಿ ಹರಸುತಿರುವವನು॥1॥ ಆದಿರಂಗ ಮಧ್ಯರಂಗ ಅಂತ್ಯರಂಗನೆಂದು। ಪುಣ್ಯಕ್ಷೇತ್ರದಿ ಪ್ರಸಿದ್ಧನಾಗಿರುವನು॥ ಪೂರ್ವರಂಗ ದಕ್ಷಿಣರಂಗ ಪಶ್ಚಿಮರಂಗ। ದರ್ಶನಮಾತ್ರದಿ ಎಮ್ಮ ಜನ್ಮ ಪಾವನವು॥2॥ ಕಾವೇರಿ ತೀರವಾಸಿಯಾದೆ ಪ್ರಥಮ ದ್ವೀಪವಾಸಿಯೆ। ಕಲ್ಯಾಣಕಾರಿ ಭಕ್ತರಾಪೊರೆವ ಕರುಣಾ ಮೂರ್ತಿಯೆ॥ ಕಾವೇರಿ ಪ್ರಾರ್ಥನೆಗೆ ಮೆಚ್ಚಿ ಪ್ರಸನ್ನನಾಗಿಹೆ। ಪಾದಸೇವೆ ಪಡೆಯುತಾ ಶಿಲಾರೂಪಿಯಾಗಿಹೆ॥3॥ ಬಲಭುಜವ ಶಿರಕೆ ಕೊಟ್ಟೆ ಎಡಭುಜವ ನೀಡಿದೆ। ದಕ್ಷಿಣಪಾದನೀಡಿ ವಾಮಪಾದ ಸಂಕುಚಿಸಿ ನೀಡಿದೆ। ಗೌತಮ ಕ್ಷೇತ್ರದಿ ಶ್ರೀ ಮಹಾಲಕ್ಷ್ಮಿಗೆ ವಕ್ಷಸ್ಥಳವ ನೀಡಿದೆ। ದಕ್ಷಿಣಗಂಗಾ ಸೇವಿತನೆ ರಂಗಪುರಿವಾಸನೆ ಶ್ರೀಪಶ್ಚಿಮ ರಂಗನಾಥನೆ ॥4॥

**ಎನ್ ನೆಂಜಲ್ ಪಳ್ಳಿಕೊಂಡವನ್ (ತಮಿಳು)** **ರಾಗ: ಶುಭಪಂತುವರಾಳಿ**

ಎನ್ ನೆಂಜಿಲ್ ಪಳ್ಳಿಕೊಂಡವನ್ ಶ್ರೀರಂಗನಾಯಕನ್। ಶಯನತ್ತಿಲ್ ಆದಿಶೇಷನ್ ಮೇಲೆ। ತಿರುವಡಿ ತಿರುಮಗಳ್‌ಮಡಿಮೇಲೆ॥ ಭೂಲೋಕ ನಾಯಗನ್ ಶ್ರೀರಂಗನ್॥1॥ ಶಯನಿಕ್ಕುಂ ಪೆರುಮಾಳಿನ್ ತೊಪ್ಪುಳ್ ಕೊಡಿ। ಅಂದ ತೊಪ್ಪುಳ್ ಕೊಡಿಮೇಲೆ ಬ್ರಹ್ಮನ- ಮರ್‌ಂದ ಪಡಿ॥ ಉಲಗತ್ತಿನ್ ಉಯಿರ್‌ಗಳ್ಳೆ ಪಡೈತ್ತಪಡಿ। ಅಪ್ಪಡೈಪಿನ್ನೈ ತಿರುಮಾನ್ ಕಾತ್ತಪಡಿ॥2॥ ಅಂಡಂ ಬಹಿರಂಗಂ ಅದೈ ಕಾಕುಂ ಅವನ್ ಕೋದಂಡಂ। ಎಣ್ಣೆಯುಂ ಮಣ್ಣುಲಗೆಯುಂ ಅಳಕ್ಕುಂ ವಾಮನನ್ ಪಾದಂ। ಹರಿಹರಿ ಹರಿ ಎನ ದಿನಂ ದಿನಂ ಸ್ಮ ೃತಿ। ನಾನ್ ವಣಂಗಿಡುಂ ಇರೈವನ್ ಒರು ಶಂಖಚಕ್ರಧಾರಿ॥3॥ ತಿರುಪತಿಯಿಲ್ ಎಳಿಂದಿರುಂ ತಿರುಮಾಲುಂ ನೀಯೆ। ಉನ್ ತಿರು ಮಾರ್ಬಿನಿಲ್ ಅಮರ್‌ಂದಿರ್ಪದು ಪದ್ಮಾವತಿತಾಯೆ। ಉಡುಪಿಯಿನಿಲೆ ವಾಳ್ಗಿಂಡ್ರ ಶ್ರೀಕೃಷ್ಣನ್ ನೀಯೇ। ಉನ್ ಅರುಳ್ ವೇಂಡಿ ನಿನ್ರಿಡುವೇನ್ ನಾನ್॥4॥ ಉಂದನ್ ಸೆಯಲ್ ನೆರೆಯೆಯುಂ ಅರವಳಿಯೆಯುಂ ಎನಕ್ಕು ಉಣರ್ತ। ಫಲ ಅವತಾರಂ ಎಡುತ್ತಾಯ್। ಎಡುತ್ತುರೈತ್ತಾಯ್। ಅದುವೇ ವಾಳ್ವಿನ್ ಆಧಾರಂ। ಅರುಳ್ ತರುಂ ದೇವಾ। ವರಂ ತರ ವಾವಾ। ಮೂ ಉಲಗೆಯುಂ ಅಳಕ್ಕಿನ್ರ ತಿರುವಿಕ್ರಮರೂಪಾ॥5॥ - ರಾಜಲಕ್ಷ್ಮಿ

**ಕಳ್ಳ ಕೃಷ್ಣ2 ಎಲ್ಲಿ ಹೋದೆಯೋ** **ರಾಗ: ಖರಹರಪ್ರಿಯ**

ಕಳ್ಳ ಕೃಷ್ಣ ಕಳ್ಳ ಕೃಷ್ಣ ಎಲ್ಲಿ ಹೋದೆಯೋ। ಕಾದು ಕಾದು ಸೋತು ಹೋದೆ ಎಲ್ಲಿ ಇರುವೆಯೊ॥ಪ॥ ಗೋಪಿ ಮನೆಗೆ ಹೋಗಿ ನೀನು ಬೆಣ್ಣೆ ಕದ್ದು। ಹಾಲು ಕುಡಿದು ಮೊಸರು ಚೆಲ್ಲಿ ಓಡಿಹೋದೆಯೋ॥2॥ ಸೀರೆ ಕದ್ದು ಮರವ ಸುತ್ತಿ ಸೂರೆಗೈದು। ಉಡುಪಿ ನಮ್ಮ ಶ್ರೀಕೃಷ್ಣ ರಂಗನಾಥನೂ॥1॥

**ಕುಣಿದಾಡೋ ಕುಂದಣದ ಸರಳೇ** **ರಾಗ: ರೇವತಿ**

ಕುಣಿದಾಡೋ ಕುಂದಣದ ಸರಳೇ। ನಲಿದಾಡೋ ಮಾಣಿಕ್ಯದ ಹರಳೇ। ಕುಣಿದಾಡೋ ರಂಗ ನಲಿದಾಡೋ॥ಪ॥ ಪತಿ ಶಾಪದಿಂ ಶಿಲೆಯಾಗಿರುವ ಗೌತಮ ಸತಿಯ ಮೆಟ್ಟಿ। ಪೆಣ್ಣನೆ ಮಾಡಿ ಅತಿ ಚೆಲು ಚರಣಾರವಿಂದದಿ। ಗೆಜ್ಜೆ

ಘಲು ಘಲು ಘಲುರೆನ್ನುತ॥1॥ ಕುಣಿದಾಡೋ ರಂಗ ನಲಿದಾಡೋ॥1॥ ಫಣಿಯ ಮೆಟ್ಟಿ ಕಾಳಿಂಗನಾ ಫಣೆಯ ತುಳಿದು। ನಾಟ್ಯವನಾಡಿದ ಅತಿ ಚಲು ಚರಣಾರವಿಂದದಿ। ಗೆಜ್ಜೆ ಘಲು(3)ರೆನ್ನುತ ಕುಣಿದಾಡೋ। ರಂಗ ನಲಿದಾಡೊ॥2॥ ಶ್ರೀಪತಿ ಕುಣಿಯೆಂದು ಮುದ್ದು ಶ್ರೀಲಕ್ಷುಮಿ ಪತಿ ಕುಣಿ ಎಂದು। ಪಾಪನಿರ್ಲೇಪನೆ ಕುಣಿ ಎಂದು। ಮುದ್ದು ಪ್ರಣವಸ್ವರೂಪನೆ ಕುಣಿ ಎಂದು। ಮುದ್ದುತನದಿ ಕೃಷ್ಣ ಕುಣಿ ಎಂದು ಮುದ್ದು। ಗೋಪಿ ಗೋಪಾಲರು ಕುಣಿಸಿದರೆಲ್ಲಾ॥3॥ ಶ್ರೀಪತಿ ಕುಣಿ ಎಂದು। ಭೂಷಣಾಲಂಕೃತ ಕುಣಿ ಎಂದು। ಬಾಲ ಭಾಸ್ಕರ ಶೋಭಿತ ಕುಣಿ ಎಂದು। ಸಾಸಿರ ನಾಮನೆ ಕುಣಿ ಎಂದು ಮುದ್ದು। ಕೇಶವ ಮೂರ್ತಿಯ ಕುಣಿಸಿದರೆಲ್ಲಾ ಶ್ರೀಪತಿ ಕುಣಿ ಎಂದು॥4॥

**ಕಂಡೆನು ದೇವನ ಶ್ರೀರಂಗದಲ್ಲಿ** **ರಾಗ: ಸಿಂಧುಭೈರವಿ**

ಕಂಡೆನು ದೇವನ ಶ್ರೀರಂಗದಲ್ಲಿ। ಕಾಪಾಡು ಎನ್ನನು ಓ ಎನ್ನ ದೇವ॥ಪ॥ ಮೌನದ ದೇವನೆ ನಿರ್ಮಲ ರೂಪನೆ। ಮಮತಾ ಪುರುಷನೆ ಕರುಣಿಸಯ್ಯ। ಹಾದಿಯನರಿಯದೆ ನಿನ್ನಲ್ಲಿ ಬರುತಿಹೆ। ಹಾದಿಯ ತೋರಿಸಿ ಹರಸಯ್ಯ ಸ್ವಾಮಿ॥1॥ ಸರ್ವರು ಭಜಿಸುವ ಸಚ್ಚಿದಾನಂದನೇ। ಸಕಲ ಕಷ್ಟಗಳನ್ನು ನೀಗಿಸಯ್ಯ। ಕಣ್ಣಿದ್ದರೂ ನಾ ಕುರುಡನಂತಿರುವೆ। ಕಾಪಾಡಿ ಎನ್ನನು ಕರುಣಿಸಯ್ಯ॥2॥

**ರಂಗನಾಥ ಅರುಳ್ ಶೈ (ತಮಿಳು)** **ರಾಗ:ಭೌಳಿ**

ರಂಗನಾಥ ಅರುಳ್ ಶೈ (3ಸಾರಿ) ರಂಗನಾಥ ಅರುಳ್ ರಂಗನಾಥ ಶ್ರೀರಂಗನಾಥಾ॥ಪ॥ ಆದಿಶೇಷನ್ ಪಾಂಬಿನ್‌ಮೇಲ್ ಪಳ್ಳಿಕೊಂಡಾಯೆ। ಅರಂಗವಾನಗರೈ ವೈಕುಂತಂ ಎಂಬಾರೆ। ಅರುಮೈ ಮೈಂದನಿನ್ ತಯರ್ ನೀಂಗ ಎಳುಂದೋಡಿ ವರುವಾಯ್। ಊಕ್ಕಂ ತಂದುನಲ್ ವಾಳ್ವದನೆ ಅಳಿಪ್ಪಾಯೆ॥1॥ ರಂಗನಾಚ್ಚಿಯಾರುಡನೆ ಸೇತ್ತು ಸೇವೈಕಂಡೇನ್। ರಮ್ಯಮಾನ ವೇಳೆಯಿಲೆ ಲಾಲಿ ಊಂಜಲ್ ಪಾಡಿನೇನ್। ನಾರಾಯಣ ನರಸಿಂಹ ನಾನ್ ಮರೈಗಳ್ ಪೋಟ್ರುರಂಗ। ಉನ್ನಡಿಯೈ ಶರಣಡೈಂದೇನ್ ನೀಲಮೇಘ ಶ್ಯಾಮ॥2॥ ಪಲಕೋಡಿ ಭಕ್ತರ್‌ಗಳುಂ ಉನ್ ಕೋಯಿಲ್ ವಂದನರೇ। ಪಂಕಜಮುಖಂ ಕಂಡು ಮನಭಾರಂಗಳುಂ ಮರಂದನರೇ। ಪಾರ್ಥನುಕ್ಕು ಗೀತೆಸೊನ್ನ ಪರಂಧಾಮ ಕಣ್ಣನೆ। ಬಂಧಂ ಪಾಸಂ ನೀಕ್ಕಿ ಎನ್ನೈ ಪರಿವುಡನೆ ಆಟ್ ಕೊಳ್ವಾಯ್॥3॥

**ರಂಗನಾಥಗೆ ಶರಣು** **ರಾಗ: ತೋಡಿ, ಆದಿತಾಳ**

ರಂಗನಾಥಗೆ ಶರಣು (ಶ್ರೀ) ರಂಗನಾಥಗೆ ಶರಣು॥ಪ॥ ರಂಗನಾಯಕಿಯೊಡಗೂಡಿ ಶೃಂಗಾರಗೊಂಡ॥ಅ.ಪ॥ ಅಂಗನೆಯರಿಗೆಲ್ಲ ಬೃಂದಾವನದೊಳು। ಸಂಗಸುಖವನಿತ್ತು ತನ್ಮಯಗೊಳಿಸಿದ॥1॥ ರಂಗಪಟ್ಟಣದಿ ನೆಲೆಸಿಹ ಸುಂದರಾಂಗ(ಶ್ರೀ) ಮಂಗಳ ಮೂರುತಿ ಗೋಪ ಶುಭಾಂಗ॥2॥ ನಂದನಕಂದ ಗೋವಿಂದ ಮುಕುಂದ। ಮಂದರೋದ್ಧಾರ ಶ್ರೀದೇವೀನಾಯಕ ರಂಗ॥3॥

**ರಂಗಪತೇ ಶ್ರೀರಂಗಪತೇ** **ರಾಗ: ವಲಚಿ**

ರಂಗಪತೇ ಶ್ರೀರಂಗಪತೇ। ಚತುರಂಗಪತೇ। ತುರಂಗಪತೇ॥ ಕಸ್ತೂರಿ ರಂಗಪತೇ ಶ್ರೀರಂಗಪತೇ॥ಪ॥ ಸಿಂಗಪತೇ ನೃಸಿಂಗಪತೇ। ಜಗನ್ನಾಥಪತೇ ಜಗದ್ರಕ್ಷಪತೇ। ವೈಕುಂಠಪತೇ- ವೇಣುಗಾನಪತೇ। ಶೇಷಶಯನ ಶ್ರೀರಂಗಪತೇ॥1॥ ಗೋಪಪತೇ ನಂದಗೋಪಪತೇ। ಬೃಂದಾವನಪತೇ ಗೋವಿಂದಪತೇ। ಅಮರಪತೇ ಅಲಂಕಾರಪತೇ। ಮೋಕ್ಷಪತೇ। ಮುಕ್ತಿದಾನಪತೇ॥2॥

**ಹೂವ ಪಾಲಿಸೋ ರಂಗ** **ರಾಗ:ಕಾಂಬೋಧಿ**

ಹೂವ ಪಾಲಿಸೋ ರಂಗ ಹೂವ ಪಾಲಿಸೋ ಕೃಷ್ಣ। ಹೂವ ಪಾಲಿಸಯ್ಯ ಮುದ್ದು ರಾಜ ಗೋಪಾಲ॥ಪ॥ ನೀರಜಾಕ್ಷ

ನಿಮ್ಮ ಪಾದ ತೋರುವುದೆಂದಿಗೊ॥ಸ್ವಾಮಿ। ವಾರಿಜನಯ್ಯನೆ ಮುದ್ದು ಮುರಾರಿ ಕೃಷ್ಣ। ರಾಜಕುಲ ರಾಜಸಿಂಧು ರಾಜ ಭೂಪತಿರಾಜ। ರಾಜನಿಗೆ। ಒಲಿದು ಇತ್ತೆ। ಜಾಜಿ ಸಂಪಿಗೆಯ ಸರವ॥1॥ ಎಳೆತುಳಸಿ ಮಾಲೆಗಳ ಸರಗಳ ಧರಿಸಿರುವ ದೇವ। ಲಲಿತದಿಂದ ಲಕ್ಷ್ಮಿಸಹಿತ ಒಲಿದು ನಿಮ್ಮ। ಒಲಿದು ನಿಮ್ಮ ಪಾದದಲ್ಲಿ ಇರುವಮಲ್ಲಿಗೆಯ ಸರವ॥2॥ ಸೃಷ್ಟಿಯಲಿ ಶ್ರೀರಂಗ ಪಟ್ಟಣದೊಳ್ ಪವಡಿಸಿದೆಯೋ। ವಜ್ರದ ಕೊಳಗವು। ನಿನ್ನ ತಲೆಯಲಿಟ್ಟಿದೆ। ತಿದ್ದಿದ್ದ ಕಸ್ತೂರಿ ಬಟ್ಟು ಮಗ್ಗುಲಿಂದ ಪವಡಿಸಿದೆಯೋ। ಮುದ್ದು ರಂಗನಾಥ ನಿಮ್ಮ ಮುಡಿಯ ಮೇಲಿರುವ ಹೂವ॥3॥

## ಕೀರ್ತನೆ

**ಓ ರಂಗಶಾಯಿ ಪಿಲಚಿನ** **ರಾಗ: ಕಾಂಬೋದಿ, ಆದಿತಾಳ**

ಓ ರಂಗಶಾಯಿ ಪಿಲಚಿನ ಓಯನುಚು ರಾರಾದಾ॥ಪ॥ ಸಾರಂಗಧರುಡುಜೂಚಿ ಕೈಲಾಸಾಧಿಪುಡುಗಾಲೇದ॥ಅ.ಪ॥ ಭೂಲೋಕ ವೈಕುಂಠ ಮಿದಿಯನಿ ನೀಲೋನ ನೀವೇಯು ಪ್ಪೊಂಗಿಶ್ರೀಲೋಲುಡ್ಯೆಯುಂಡಿನ ಮಾಚಿಂತದೀರೆ ಡಿದೆನ್ನಡೋ? ಮೇಲೋರ್ವಲೇನಿ ಜನುಲಲೋನೇ ಮಿಗುಲ ನೊಗಿಲಿ ದಿವ್ಯ ರೂಪಮುನು ಮುತ್ಯಾಲ ಸರುಲಯುರಮುನುಗನ ವಚ್ಚಿತಿ ತ್ಯಾಗರಾಜ ಹೃದ್ಭೂಷಣ॥ಚರಣ॥

**ಫಣಿಪತಿ ಶಾಯಿ ಮಾಂಪಾತು** **ರಾಗ: ಝೇಂಕಾರಧ್ವನಿ, ಆದಿತಾಳ**

ಫಣಿಪತಿ ಶಾಯಿ ಮಾಂ ಪಾತು ಪಾಲಿತಾಬ್ಧಿಪ ಹೇ॥ಪ॥ ಮಣಿಮಯ ಮಕುಟ ವಿರಾಜಮಾನ ಮನ್ಮಥಕೋಟಿ ಸಮಾನ॥ಅ.ಪ॥ ಗಜವರಗಮನ ಕಮನೀಯಾನನ। ಸುಜನಗಣಾವನ ಸುಂದರವದನ। ಗಜಮುಖ ವಿನುತ ಕರುಣಾಕರ। ನೀರಜನಯನ ತ್ಯಾಗರಾಜ ವಿನುತ ಹೇ॥ಪ॥ಚರಣ॥

**ರಾಜುವೆಡಲೆ ಜೂತಾಮುರಾರೇ** **ರಾಗ: ದೇಶ್ಯತೋಡಿ, ರೂಪಕತಾಳ**

ರಾಜುವೆಡಲೆ ಜೂತಾಮುರಾರೇ ಕಸ್ತೂರಿ ರಂಗ॥ಪ॥ ತೇಜಿನೆಕ್ಕಿ ಸಮಸ್ತ ರಾಜು ಲೂಡಿಗಮು ಜೇಯ। ತೇಜರಿಲ್ಲು ನವರತ್ನವು ದಿವ್ಯ ಭೂಷಣಮುಲಿಡಿ ರಂಗ॥ಅ.ಪ॥ ಕಾವೇರಿ ತೀರಮುನನು ಪಾವನಮಗು ರಂಗಪುರಿನಿ। ಶ್ರೀವೆಲಯು ಚಿತ್ರವೀಧಿಲೋ ವೇಡ್ಕಗ ರಾಗ। ಸೇವನು ಗನಿ ಸುರುಲು ವಿರುಲಚೇ ಪ್ರೇಮನು ಪೂಜಿಂಚಗ। ಭಾವಿಂಚು ತ್ಯಾಗರಾಜು ಬಾಡಗ ವೈಭೋಗ ರಂಗ॥ಚರಣ॥

**ವಿನರಾದಾ ನಾ ಮನವಿ (ಉತ್ಸವ ಸಂಪ್ರದಾಯ)** **ರಾಗ: ದೇವಗಾಂಧಾರಿ, ದೇಶಾದಿತಾಳ**

ವಿನರಾದಾ ನಾ ಮನವಿ॥ವಿ....॥ ಕನಕಾಂಗ ಕಾವೇಟಿ ರಂಗ ಶ್ರೀ। ಕಾಂತ ಕಾಂತಲೆಲ್ಲ ಕಾಮಿಂಚಿ ಪಿಲಚಿನ॥ವಿ...॥ ಅ.ಪ॥ ತೇಜಿನೆಕ್ಕಿ ಬಾಗ ತೆರವುನ ರಾಗ। ರಾಜಸತುಲು ಜೂಚಿ ರಮ್ಮನಿ ಪಿಲಚಿನ॥ವಿ...॥1॥ ಭಾಗಧೇಯ ವೈಭೋಗ ರಂಗ ಶ್ರೀ-। ತ್ಯಾಗರಾಜನುತ ತರುಣುಲು ಬಿಲಚಿನ॥ವಿ...॥2॥

**ಶ್ರೀ ರಂಗನಾಥಾಯ** **ರಾಗ: ಧನ್ಯಾಸಿ, ರೂಪಕತಾಳ**

ಶ್ರೀ ರಂಗನಾಥಾಯ ನಮಸ್ತೇ॥ಪ॥ ಶ್ರೀರಂಗಪುರಿ ವಿಲಸಿತ ಶ್ರೀರಮಾಂತರಂಗಾಯ। ಶ್ರೀರಂಗನಾಯಕೀ ಸಮೇತಾಯ ಗುರುಗುಹನುತಾಯ॥

## ಸಂಪ್ರದಾಯ

**ಶೋಭನವೆನ್ನಿರೆ ಸುರರಂಗನೆಯರೆಲ್ಲ** ರಾಗ: ಆನಂದಭೈರವಿ-ತ್ರಿಶ್ಯಏಕತಾಳ

ಶೋಭನವೆನ್ನಿರೆ ಸುರರಂಗನೆಯರೆಲ್ಲ॥ ಶೋಭಾನವೆನ್ನಿ ಶುಭವೆನ್ನಿ॥ಪ॥ ಮಂಗಳದೇವಿಯ ರಮಣ ಬಾ॥ ಶೃಂಗಾರದ

ಗುಣ ನಿಧಿಯೇ ಬಾ॥ ಅಂಗಜ ಜನಕ ಅರವಿಂದದಳಾಕ್ಷನೆ ರಂಗ ಬಾ॥ ಭವಭಯಭಂಗ ಬಾ। ದೇವೋತ್ತುಂಗ ಬಾ ಜಗದಂತ ರಂಗ ಬಾ ಹಸೆಯ ಜಗುಲಿಗೆ ॥ಶೋಭನ॥1॥ ಸಂಕರುಷಣ ಅನಿರುದ್ಧಾ ಬಾ॥ ಪಂಕಜ ಸಂಭವನಯ್ಯ ಬಾ॥ ಕುಂಕುಮಾಂಕಿತನೆ ಭಕುತ ॥ ಕುಮುದಮೃಗಾಂಕ ಬಾ॥ ನಿಷ್ಕಳಂಕ ಬಾ॥ ಶಂಖಚಕ್ರಾಂಕ ಬಾ॥ ಅಹಿಪರಿಯಂಕ ಬಾ॥ ಹಸೆಯ ಜಗುಲಿಗೆ॥ಶೋಭನ॥2॥ ಹೇಮಾಂಬರಧರ ಹರಿಯೆ ಬಾ॥ ಸಾಮಜರಾಜ ವರದಾ ಬಾ,॥ ಸಾಮವಿಲೋಲನೆ ಸದ್ಗುಣ ಶೀಲನೆ ರಾಮ ಬಾ॥ ಸುರಸಾರ್ವಭೌಮ ಬಾ ದೈತ್ಯವಿರಾಮ ಬಾ॥ ರಣರಂಗ ಭೀಮ ಬಾ ಹಸೆಯ ಜಗುಲಿಗೆ ॥ಶೋಭನ॥3॥ ಅನಂತ ಅವತಾರ ಅಚ್ಯುತ ಬಾ॥ ಉನ್ನತ ಮಹಿಮನೆ ಯಾದವ ಬಾ॥ ಘನ್ನಮೂರುತಿಯೆ, ಗರುಡಗಮನ ಹರಿಮೋಹನ್ನ ಬಾ॥ ಸುಪ್ರಸನ್ನ ಬಾ ಭಾಗ್ಯಸಂಪನ್ನ ಬಾ॥ ಜೀವರಿಂಭಿನ್ನ ಬಾ ಹಸೆಯ ಜಗುಲಿಗೆ॥ಶೋಭನ॥4॥ ನಾರಾಯಣ ದಶರೂಪ ಬಾ॥ ಚಾರುಚರಿತಪ್ರತಾಪ ಬಾ॥ ಶೌರಿಮುರಾರಿಯೆ ನಿಟಿಲಕಸ್ತೂರಿಯ ಲೇಪ ಬಾ॥ ಯದುಕುಲ ದೀಪ ಬಾ ನಿತ್ಯಸಲ್ಲಾಪ ಬಾ॥ ನಮ್ಮ ಸಮೀಪ ಬಾ ಹಸೆಯ ಜಗುಲಿಗೆ ॥ಶೋಭನ॥5॥ ವಾಸುದೇವ ಮುಕುಂದ ಬಾ। ಸಾಸಿರ ನಾಮ ಗೋವಿಂದ ಬಾ,॥ ಕೇಶವ ಪುರುಷೋತ್ತಮ ನರಸಿಂಹ ಉಪೇಂದ್ರ ಬಾ॥ ಗೋಪಿಯ ಕಂದ ಬಾ, ಬಹುಬಲವೃಂದ ಬಾ॥ ಅತಿಜವದಿಂದ ಬಾ ಹಸೆಯ ಜಗುಲಿಗೆ॥ಶೋಭನ॥6॥ ಪರತತ್ವವತಿ ಚಿಂತ ಬಾ॥ ಪರಬೊಮ್ಮನೆ ಅತಿ ಶಾಂತ ಬಾ॥ ಪರಮಾತ್ಮನೆ ಪರಿಪೂರ್ಣ ವಿಭೂತಿವಂತ ಬಾ॥ ಅಖಿಲ ವೇದಾಂತ ಬಾ, ರುಕ್ಮೀಣೀಕಾಂತ ಬಾ॥ ಸದ್ಗುಣವಂತ ಬಾ ಹಸೆಯ ಜಗುಲಿಗೆ ॥ಶೋಭನ॥7॥ ಉದಯ ಪ್ರಭಾಕರ ಭಾಸ ಬಾ॥ ತ್ರಿದಶ ಗಣನುತವಿಲಾಸ ಬಾ॥ ಪದುಮನಾಭ ಮಾಧವ ಶ್ರೀಧರಸುನಾಸ ಬಾ॥ ಸಿರಿಮಂದಹಾಸ ಬಾ ಭಕುತ ಉಲ್ಲಾಸ ಬಾ॥ ಶ್ರೀಶ್ರೀನಿವಾಸ ಬಾ ಹಸೆಯ ಜಗುಲಿಗೆ ॥ಶೋಭನ॥8॥ ಕೃಷ್ಣವೇಣಿಯ ಪಡೆದವನೆ ಬಾ॥ ಜಿಷ್ಣುರಥ ಹೊಡೆದವನೆ ಬಾ॥ ಕೃಷ್ಣೆಯ ಕಷ್ಟವ ನಷ್ಟಮಾಡಿದ ಕೃಷ್ಣ ಬಾ॥ ಯದುಕುಲ ಶ್ರೇಷ್ಠ ಬಾ ಸತತ ಸಂತುಷ್ಟ ಬಾ॥ ಉಡುಪಿಯ ಕೃಷ್ಣ ಬಾ ಹಸೆಯ ಜಗುಲಿಗೆ॥ಶೋಭನ॥9॥ ಎಲ್ಲರೊಳಗೆ ವ್ಯಾಪಕನೆ ಬಾ॥ ಬಲ್ಲಿದ ದೊರೆಗಳ ಅರಸನೆ ಬಾ॥ ಎಲ್ಲಿನೋಡಲು ಪ್ರತಿಗಾಣೆ ನಿನಗೆ ಸಿರಿನಲ್ಲ ಬಾ॥ ಅಪ್ರತಿಮಮಲ್ಲ ಬಾ ಭಕ್ತವತ್ಸಲ ಬಾ॥ ವಿಜಯವಿಠಲ ಬಾ ಹಸೆಯ ಜಗುಲಿಗೆ ॥ಶೋಭನ॥10॥

**ಸಾರಿ ಬಾ ಕಸ್ತೂರಿ ರಂಗ (ಸಂಪ್ರದಾಯ)** **ರಾಗ:ಕಾಪಿ-ರೂಪಕತಾಳ**

ಸಾರಿ ಬಾ ಕಸ್ತೂರಿ ರಂಗ ಸರಸದಿಂದ ಪೀಠಕೀಗ। ಆದಿಶೇಷನಾ ಮೇಲೆ ಅಪ್ರಮೇಯಸ್ವಾಮಿ ಬಾರೈ॥1॥ ಅಂಗಿ ತೊಡಿಸಿ ಉಂಗುರವಿಟ್ಟು ಕಂಗಳಿಗೇ ಕಪ್ಪನ್ಹಚ್ಚಿ। ಅಂಗಳದಲ್ಲಾಡುವ ಕೃಷ್ಣನೇ ರಂಗನಾಥಸ್ವಾಮಿ ಬಾರೈ॥2॥ ತಿಲಕವಿಟ್ಟು ಮಲಕ ಬಿಗಿದು ಪದಕಹಾರ ಕೊರಳಿಗ್ಹಾಕಿ। ಜುಮುಕಿನಿಂದಲೆ ಚಾಕುಳಿ ಹೊಳೆಯುತ। ಧುಮುಕಿ ಧುಮುಕಿ ಸ್ವಾಮಿ ಬಾರೈ॥3॥ ಕೃಷ್ಣ ಹಸಿದನೆಂದು ಗೋಪಿ ಬಟ್ಟಲತುಂಬ ಕ್ಷೀರಕೊಡಲು। ಕೆಟ್ಟ ಪಾಪಿಯ ದೃಷ್ಟಿ ತಾಕಿತು ಕೊಟ್ಟ ಕ್ಷೀರ ಮುಟ್ಟಲಿಲ್ಲ॥4॥

## ಲಾಲಿ

**ಆಡಿ ತೂಗುವೆ ರಂಗನನೂ** **ರಾಗ: ಕುರಂಜಿ**

ಆಡಿ ತೂಗುವೆ ರಂಗನನೂ ಪಾಡಿ ಕೊಂಡಾಡುವೆ ಕೃಷ್ಣನನೂ॥ಆಡಿ॥ ಚಿನ್ನದ ಸರಪಣಿ ರನ್ನದ ಮಣಿಗಳು ಪನ್ನಂಗವೇಣಿಯರೆಲ್ಲ ತೂಗುವ॥ಆಡಿ॥ ಸಾರಸ ನೇತ್ರನ ಸಾಧು ಪವಿತ್ರನ ಸಾರಸಮುಖಿಯರು ಸೇರಿ ತೂಗುವ॥ಆಡಿ॥ ಎಡದಲ್ಲಿ ಭೂದೇವಿ ಬಲದಲ್ಲಿ ಶ್ರೀದೇವಿ ನಡುವೆ ಶ್ರೀಪರಮಾತ್ಮನ ಸೇರಿ ತೂಗುವ॥ಆಡಿ॥

**ಕಸ್ತೂರಿ ರಂಗ ಕರುಣಾಕಟಾಕ್ಷ (ತಮಿಳು)** **ರಾಗ:ನೀಲಾಂಬರಿ**

ಕಸ್ತೂರಿ ರಂಗ ಕರುಣಾಕಟಾಕ್ಷ। ಕಾವೇರಿ ತೀರವಾಸ ಕರುಣಾ ಕಟಾಕ್ಷ॥ಲಾಲಿ॥ ಕಣ್ಣುಂಗ ತೂಂಗ। ತೂಂಗ ಕದವೈ ಮೆಲ್ಲ ತಿರಂದು। ಕಾಣಾಮಲ್ ಪೋನಾರೋ। ಪಾರಾಮಲ್ ಪೋನಾರೋ॥ ತಿರುಂಬಿ ಪಾರಾಮಲ್‌ಪೋನಾರೋ ಕಾವೇರಿ ರಂಗ॥ಲಾಲಿ॥

**ಜೋ5 ರಂಗಧಾಮ** **ರಾಗ: ಕುರಂಜಿ, ಆದಿತಾಳ**

ಜೋ ಜೋ ಜೋ ಜೋ ಜೋರಂಗಧಾಮ। ಜೋ ಜೋ ಜೋ ಜೋ ಜೋರಣ ಭೀಮ।।ಪ।। ಜೋ ಜೋ ಭಕ್ತರ ಕಷ್ಟ ನಿರ್ಧೂಮ। ಜೋ ಜೋ ದಶರಥ ರಾಮ ನಿಸ್ಸೀಮ।।ಅ.ಪ.।। ಭೂಮಿಯ ಚಿನ್ನದ ತೊಟ್ಟಿಲ ಮಾಡಿ। ಸೋಮ ಸೂರ್ಯರೆಂಬ ಕಲಶವ ಹೂಡಿ। ನೇಮದಿ ವೇದಗಳ ಸರಪಣಿ ಮಾಡಿ। ಆ ಮಹಾಕಾಶಕೆ ದಂಟಸೂಡಿ।।1।। ಸರಸಿಜೋದ್ಭವ ಸರಸ್ವತಿ ಭಾರತಿಯರು। ಗರುಡ ಶೇಷರುದ್ರರಿವರ ಸತಿಯರು। ಸುರರು ಕಿನ್ನರರು ಕಿಂಪುರುಷನಾರದರು। ಪರಿಪರಿ ಗೀತದಿ ಸ್ತುತಿಸಿ ಪಾಡಿದರು।।2।। ವಸುದೇವ ಸುತನಾದ ಮುದ್ದು ಮುರಾರಿ। ಅಸುರೆ ಪೂತನಿಯ ಪ್ರಾಣಾಪಹಾರಿ। ಅಸಮ ಸಾಹಸಮಲ್ಲ ದೈತ್ಯರ ವೈರಿ। ಶಿಶುವಾಗಿ ದೇವಕಿಗಾನಂದ ತೋರಿ।।3।। ಬದ್ಧನಾಗಿ ಪತಿವ್ರತೆಯರನಾಳಿದೆಯಲ್ಲ। ಮುದ್ದು ತುರಗವನೇರಿ ಕಲ್ಕ್ಯನಾದ್ಯಲ್ಲ। ಪದ್ಮನಾಭ ಸಿರಿ ಭಕ್ತವತ್ಸಲ। ನಿದ್ದೆಯ ಮಾಡಯ್ಯ ಶ್ರೀರಂಗವಿಠಲ।।4।।

**ತೂಗಿರೆ ರಂಗನ ತೂಗಿರೆ ಕೃಷ್ಣನ** **ರಾಗ: ನೀಲಾಂಬರಿ**

ತೂಗಿರೆ ರಂಗನ ತೂಗಿರೆ ಕೃಷ್ಣನ। ತೂಗಿರೆ ಅಚ್ಯುತಾನಂತನ।।ಪ।। ತೂಗಿರೆ ವರಗಿರಿಯಪ್ಪ ತಿಮ್ಮಪ್ಪನ। ತೂಗಿರೆ ಕಾವೇರಿ ರಂಗಯ್ಯನ।।ಅ.ಪ।। ನಾಗಲೋಕದಲ್ಲಿ ನಾರಾಯಣ ಮಲಗ್ಯಾನೆ। ನಾಗಕನ್ನಿಕೆಯರು ತೂಗಿರೆ। ನಾಗವೇಣಿಯರು ನೇಣ ಪಿಡಿದುಕೊಂಡು। ಬೇಗನೆ ತೊಟ್ಟಿಲ ತೂಗಿರೆ।।1।। ಇಂದ್ರಲೋಕದಲ್ಲುಪೇಂದ್ರ ಮಲಗ್ಯಾನೆ। ಇಂದುಮುಖಿಯರೆಲ್ಲ ತೂಗಿರೆ। ಇಂದ್ರಕನ್ನಿಕೆಯರು ಚಂದದಿ ಬಂದು। ಮುಕುಂದನ ತೊಟ್ಟಿಲ ತೂಗಿರೆ।।2।। ಆಲದೆಲೆಯ ಮೇಲೆ ಶ್ರೀಲೋಲ ಮಲಗ್ಯಾನೆ। ನೀಲಕುಂತಳೆಯರು ತೂಗಿರೆ। ವ್ಯಾಳಶಯನ ಹರಿ ಮಲಗು ಮಲಗುಯೆಂದು। ಬಾಲಕೃಷ್ಣಯ್ಯನ ತೂಗಿರೆ।।3।। ಸಾಸಿರನಾಮನೆ ಸರ್ವೋತ್ತಮನೆಂದು ಸೂಸುತ್ತ ತೊಟ್ಟಿಲ ತೂಗಿರೆ। ಲೇಸಾಗಿ ಮಡುವಿನೊಳ್ ಶೇಷನ ತುಳಿದಿಟ್ಟ। ದೋಷವಿದೂರನ ತೂಗಿರೆ।।4।। ಅರಳೆಲೆ ಮಾಗಾಯಿ ಕೊರಳ ಮುತ್ತಿನಹಾರ। ತರಳನ ತೊಟ್ಟಿಲ ತೂಗಿರೆ। ಸಿರಿದೇವಿ ರಮಣನೆ ಪುರಂದರವಿಠಲನೆ। ಕರುಣದಿ ಮಲಗೆಂದು ತೂಗಿರೆ।।5।।

**ತೂಗಿರೋ ರಂಗನ್ನ ತೂಗಿರೋ** **ರಾಗ:ಆನಂದಭೈರವಿ**

ತೂಗಿರೋ ರಂಗನ್ನ। ತೂಗಿರೋ ಕೃಷ್ಣನ್ನ ತೂಗಿರೋ ಬೇಲೂರ ಚೆನ್ನಿಗನಾ। ತೂಗಿರೋ ಶ್ರೀಚೆನ್ನ ಕೇಶವನಾ....।।ಪ।। ಉಡುಪಿಯಲಿ ಜನ್ಮವ ತಳೆದವನಾ। ಬೃಂದಾವನದಿ ನೆಲೆಗೊಂಡವನಾ। ತುಂಗಾ ತೀರದಿ ನಿಂದವನ। ತೂಗಿರೋ ಶ್ರೀ ಚೆನ್ನ ಕೇಶವನಾ।।1।। ಶ್ರೀರಂಗ ಪಟ್ಟಣದಿ ಮಲಗಿದವನ। ಮೇಲುಕೋಟೆಯ ಸ್ವಾಮಿ ಚೆಲುವರಾಯನ। ಸತ್ಯಾ ಮೂರುತಿಯ ನಿತ್ಯ ಭಜಿಸಿರೋ। ಚೆಲುವ ನಮ್ಮ ಶ್ರೀರಂಗನಾ।।2।।

**ನೋಡೋ ರಂಗ ತೂಗುವೆನು**

ನೋಡೋ ರಂಗ ತೂಗುವೆನು ಮೋಡಿಯೇತಕೋ। ಪಾಡುವೇನು ಜೋಗುಳಾವನು। ನೀಡುವೇ ಹಾಲನು। ಆಡಬಾರದೇ।।ಪ।। ನಿನ್ನ ಕಾಣದೇ ಎನ್ನ ಮನವು ಖಿನ್ನವಾಗುವುದನ್ನು ಕಾಣೆಯಾ। ಸನ್ನುತಾಂಗನೇ। ಎನ್ನಮಾತನು।।1।। ಮನ್ನಿಸಿ ಮನೆಯೊಳು। ಇನ್ನಾದರು ಇರುನೋಡು ಕಮಲಾಕಾಂತನೇ। ಕಮಲನಯನಾ ಕಮಲಾನಾಭ ಶ್ರೀಕಾಂತ ಕೃಷ್ಣನೇ।।2।। ಪ್ರೇಮದಿಂದಲಿ ಗೈದ ತಪ್ಪನು ಕ್ಷಮಿಸೆಲೈ। ನಮಿಸುವೆ ರಮಾಕಾಂತನೇ। ಮಾರಜನಕನೇ ವಾರಿಜಾಕ್ಷನೆ ಸಾರುತಿರ್ಪರು ನಿನ್ನ ಕೀರ್ತನೆ।। ಜಾರನೆಂದು ಕ್ರೂರಮಾಗಿ। ಈರೇಳು ಜಗದೊಳು। ದೂರುವರೆಲ್ಲರೂ।।3।।

**ರಂಗ ಮನ್ನಾರ್ ತಿರುಕ್ಕೈಯಿಲೆ (ತಮಿಳು)** **ರಾಗ: ಕುರಂಜಿ**

ರಂಗ ಮನ್ನಾರ್ ತಿರುಕ್ಕೈಯಿಲೆ ಸ್ವರ್ಣಕಿಳಿ ಒನ್ರು ಕೂಡಿಕೊಂಡು। ಕೋದೈಯುಡನ್ ವಂದು ನಿನ್ರಾನ್ ಪಾಡಿರಿಂದ ಊಂಜಲ್।।ಪ।। ಪಚ್ಚೈರತ್ನ ಮರಗತ್ತತ್ತಾಲ್ ಪಂದಲಲಂಕರಿತ್ತು। ಪಾರಿಜಾತ ಪುಷ್ಪ ಮುಡನ್ ಪರಿಪೂರ್ಣಮಾನ

ರಂಗನುಕ್ಕುಲಾಲಿ॥1॥ ಮುತ್ತಾಲೈ ಅಂಗಿಗಳುಂ ಮುಳುವೈರತ್ತಾಲೆ ಪಚ್ಚೆಯುಡನ್। ಪದಕತ್ತೋಡೈ ವಂದು ನಿನ್ರ ಮಂಗೈಯುಡನ್ ರಂಗನುಕ್ಕು ಲಾಲಿ॥2॥ ನಲ್ ಪವಳ ಚದುರಂಗ ನಲ್ಲ ಮುತ್ತುಮಾಲೈ ಧರಿಚ್ಚಿ। ನಡುವಾಲೆ ಪೆಣ್‌ಕಿಳಿಯುಡನೆ ವಂದುನಿನ್ರ ರಂಗನುಕ್ಕು ಲಾಲಿ॥3॥ ಪರಿಪೂರ್ಣ ರಂಗಲಾಲಿ ಪರಿಪೂರ್ಣ ಮಂಗೈಲಾಲಿ॥

## ಜಾನಪದ

### ಘಲ್ಲು ಘಲ್ಲೆನುತಾ ಗೆಜ್ಜೆ — ರಾಗ: ಖರಹರಪ್ರಿಯ

ಘಲ್ಲು ಘಲ್ಲೆನುತಾ ಗೆಜ್ಜೆ ಘಲ್ಲು ತಾನೆನುತಾ॥3ಸಾರಿ॥ ಬಲ್ಲಿದ್ ರಂಗನ್ ವಲ್ಲಿಯ ಮೇಲೆ ಚೆಲ್ಲಿದರೋಕುಳಿಯಾ। ಓಹೋ ನಮ್ ಬಲ್ಲಿದ್ ರಂಗನ್ ವಲ್ಲೀ ಮೇಲೆ ಚೆಲ್ಲಿದರೋಕುಳಿಯಾ॥ ಅರೆದರು ಅರಿಶಿನವಾ ಅದಕೆ ಬೆರೆಸ್ಯಾರು ಸುಣ್ಣಾವಾ ಅದ್ಕೆ ಬೆರೆಸ್ಯಾರು ಸುಣ್ಣಾವಾ। ಅಂದವುಳ್ಳ ರಂಗನ್ ಮೇಲೆ ಹಿಂಗಂದರೋಕುಳಿಯಾ ಅಂದವುಳ್ಳ ರಂಗನ್ ಮೇಲೆ ಹಿಂಗಂದರೋಕುಳಿಯಾ॥ ಹಾಲಿನೋಕುಳಿಯೋ ಒಳ್ಳೇ ನೀಲದೋಕುಳಿಯೋ। ಲೋಲನಾದ ರಂಗನ ಮೇಲೆ ಚೆಲ್ಲಿದರೋಕುಳಿಯಾ। ಲೋಲನಾದ ರಂಗನ ಮೇಲೆ ಚೆಲ್ಲಿದರೋಕುಳಿಯಾ॥ ಗಂಧದೋಕುಳಿಯೋ ಒಳ್ಳೇ ಚಂದದೋಕುಳಿಯೋ। ಅಂದವುಳ್ಳ ರಂಗನ ಮೇಲೆ ರಂಗಿನೋಕುಳಿಯೋ ನಮ್ ಅಂದವುಳ್ಳ ರಂಗನ ಮೇಲೆ ರಂಗಿನೋಕುಳಿಯೋ॥ ತುಪ್ಪದೋಕುಳಿಯೋ ಒಳ್ಳೆ ಒಪ್ಪದೋಕುಳಿಯೋ॥2 ಸಾರಿ॥ ಒಪ್ಪವುಳ್ಳ ರಂಗನ ಮೇಲೇ ತುಪ್ಪದೋಕುಳಿಯೋ॥2ಸಾರಿ॥

### ತಿರುಪತಿ ತಿಮ್ಮಪ್ಪ ಕಂಚೀಯ — ರಾಗ: ಸಾವೇರಿ

ತಿರುಪತಿ ತಿಮ್ಮಪ್ಪ ಕಂಚೀಯ ವರದಪ್ಪ ಬಂದಿಹೆ ಇಲ್ಲಿಗೆ ಕಾವೇರಿ ರಂಗಪ್ಪ॥ಪ॥ ಹಾಲಿನ ಕಡಲಿನಲ್ಲಿ ಆಲದೆಲೆಯ ಮ್ಯಾಲೆ ತೇಲುತ್ತ ಮಲಗಿದ್ದು ಸಾಲದೇ ನಿದ್ರೆಯದು॥1॥ ನದಿಗಳಾ ನಡುವಿನಲಿ ಉರುಗದಾ ಮಡಿಲಿನಲಿ। ಮಲಗಿಹೆ ಬಂದಿಲ್ಲಿ ಮುಗಿಯದ ನಿದ್ರೆಯಲಿ॥2॥ ಎಚ್ಚರವಾಗಯ್ಯ ಕಣ್ಣನು ತೆಗೆಯಯ್ಯ। ಎಲ್ಲರೂ ಕಾದಿಹೆವು ಸಲ್ಲದು ನಿದ್ರೆಯದು॥3॥

### ನಡೀ ನಡೀ ಗಿರಿಗ್ಹೋಗೋಣ — ರಾಗ: ಹರಿಕಾಂಭೋದಿ

ನಡೀ ನಡೀ ಗಿರಿಗ್ಹೋಗೋಣ ಅಣ್ಣಾ! ಬಿನ್ನಾಣ ರಂಗನ ಚೆನ್ನಾದ ಗಿರಿಗೆ॥ಪ॥ ರಂಗನ್ನ ನೋಡೋಕೆ ರೇಕು ಮಾಣಿಕವೇಕೆ। ಅಂಗೈ ತುಂಬಾ ಹಣವೇಕೆ। ಅಂಗೈ ತುಂಬಾ ಹಣವೇಕೆ। ಬಿಳಿಗಿರಿಯ ಇಂಬುಳ್ಳ। ರಂಗನ ಬೇಡೋಕೇ॥1॥ ನೀಲ ಕುದುರೆಯನ್ನೇರಿ ವಾಲಾಡೋ ರಂಗಯ್ಯ। ಕಾಣೋಕೆ ಬಂಗಾರ ಹಣವೇಕೆ.। ಬಿಳಿಗಿರಿಯ ಚಂದುಳ್ಳ ರಂಗನ್ನ ಬೇಡೋಕೆ॥2॥

### ಬಿದಿರೇ2 ಏನಾದೆ ಬಡವರ — ರಾಗ: ಭೀಮ್ ಫಲಾಸ್

ಬಿದಿರೇ ಬಿದಿರೇ ಏನಾದೆ। ಬಡವರ ಹಟ್ಟಿಗೆ ನೆರಳಾದೆ। ಮುತ್ತು ಕೇರುವ ಮೊರವಾದೆ। ಬಿಳಿಗಿರಿ ರಂಗನ ಕೊಳಲಾದೆ॥ಪ॥ ನವಿಲೇ ನವಿಲೇ ಏನಾದೇ। ನಲಿಯುವ ಬೆಡಗೇ ನೀನಾದೆ। ಸಾವಿರ ಕಂಗಳ ಬೆರಗಾದೆ। ಸೊಗಸು ರಂಗನ ಶಿರಕಾದೆ॥1॥ ತುಳಸಿ ತುಳಸಿ ಏನಾದೆ। ಪಾಪವ ತೊಳೆಯುವ ಎಲೆಯಾದೆ। ಗಂಧದ ಗೌಲಲಿ ಜಗಕಾದೆ। ಸುಂದರ ರಂಗನ ಕೊರಳಾದೆ॥2॥ ಗೋವೇ ಗೋವೇ ಏನಾದೆ। ಜೀವದ ಸೆಲೆಯೇ ನೀನಾದೆ। ಅಮೃತ ಕ್ಷೀರವ ನೀ ಕರೆದೆ। ಅಚ್ಯುತರಂಗನ ಜೊತೆಯಾದೆ॥3॥

### ಬೆಳ್ಳಿ ಬೆಟ್ಟದ ಮೇಲೆ — ರಾಗ: ಶಿವರಂಜನಿ

ಬೆಳ್ಳಿ ಬೆಟ್ಟದ ಮೇಲೆ ಬೆಳ್ಳಿ ಮೋಡದ ನಡುವೆ। ಭಿಮ್ಮ್ರನೆ ನಿಂತಿರುವ ಶ್ರೀರಂಗಾ...॥2ಸಾರಿ॥ ನಿನ್ನ ಕಂಡು -ಉಬ್ಬಿದೆ

ನನ್ನಾ ಚೆಲುಮನವು(2ಸಾರಿ)।। ಗಂಧದ ವನದಲ್ಲಿ ಘಂ ಎಂದು ಬರುವಾಗ। ಗಂಧಾದ ವನದಲ್ಲಿ ಘಂ ಎಂದು ಬರುವಾಗ। ರಂಗನಾಯಕಿಯ ಬೆಂಬತ್ತಿ (2ಸಾರಿ) ಹೋಗ್ವಾಗ। ನೀನೊಲಿದೆ ಅವಳ ಚೆಲುವಿಗೆ (2ಸಾರಿ) ।।1।। ಸೋಲಿಗರ ಸುಂದರಿಯ ಚೆಲುವಿಗೆ ಮನಸೋತು। ಸೋಲಿಗಾರ ಸುಂದರಿಯ ಚೆಲುವೀಗೆ ಮನಸೋತು। ಬಿಳಿಗಿರಿ ರಂಗಯ್ಯ ನೀನಾದೆ। ಬಿಳಿಗಿರಿ ರಂಗಯ್ಯ ನೀನಾದೆ ಓ ದೇವಾ ಕೈಯೆತ್ತಿ ಮುಗಿವೆ ನಿನ್ನಡಿಗೆ(2ಸಾರಿ)।।2।। ಸಂಪಿಗೆ ವನದಲ್ಲಿ ಕಂಪನ್ನು ಚೆಲ್ಲಿರುವ। ಸಂಪೀಗೆ ವನದಲ್ಲಿ ಕಂಪನ್ನು ಚೆಲ್ಲಿರುವ। ಶ್ವೇತಾದ್ರಿ ಗಿರಿಯೊಡೆಯ ಓ ದೇವಾ। ಶ್ವೇತಾದ್ರಿ ಗಿರಿಯೊಡೆಯ ಓದೇವಾ ಗಿರಿಯರಸ। ಕರುಣಾಳು ಜಗದೊಡೆಯ ರಂಗಯ್ಯ।।3 ಸಾರಿ।। ।।3।।

### ರಂಗ ಬರ್ತಾನಂತ ರಂಗೋಲಿಯ

ರಂಗ ಬರ್ತಾನಂತ ರಂಗೋಲಿಯ ಹೊಯ್ದೆ। ರಂಗೋಲಿಯಾ ಹೊಯ್ದೆ। ರಂಗಾನ ಹಿಂದೆ ರಮಣೀರು ಬರ್ತ್ತಾರೆಂದು ಮಂಗಳಾರತಿ ನಾ ತಂದೆ। ದಿವ್ಯ ಮಂಗಳಾರತಿಯ ನಾ ತಂದೆ।।1।। ಕಂಬ ಕಂಬಕ್ಕೆ ಲಿಂಬೆ ಹಣ್ಣಿನ ಪೂಜೆ। ಕಂಬ ಕಂಬಕ್ಕೆ ಮುರಿ ದೀಪ। ಕಂಬ ಕಂಬಕ್ಕೆ ಮುರೀದೀಪ ಬೇಟೆಗಾರ। ರಂಗಯ್ನ ಪೂಜೆ ದಿನ ದಿನವೂ। ಶ್ರೀರಂಗಯ್ನ ಪೂಜೆ ದಿನ ದಿನವೂ।।2।। ಅಚ್ಚ ತುಳಸೀ ದಂಡೆ। ನಿತ್ಯ ನೀಲಿಯ ನಾಮ। ಪಕ್ಷಿಯ ನಿಗಕೆ ತಿರುಗೋನೆ। ಪಕ್ಷಿಯ ನೀಗಕೆ ತಿರುಗೋನೆ ರಂಗಯ್ಯ। ಲಕ್ಷ್ಮೀ ಆರತಿಯ ಹಿಡಿದಾಳೊ। ಮಹಾಲಕ್ಷ್ಮೀ ಆರತಿಯ ಹಿಡಿದಾಳೋ।।3।। ಹೊತ್ತು ಮೂಡುವ ಮುನ್ನ ಹೊನ್ನಮ್ಮ ತಾನೆದ್ದು। ಶೇಡಿ ಮರಗೇಯ ಹಿಡಿಕೊಂಡು। ಶೇಡಿ ಮರಗೇಯ ಹಿಡಿಕೊಂಡು। ಷಡ್ ಗೋಮಯ ಮಾಡಿಯಾಳು। ಷಡ್ ಗೋಮಯ ಮಾಡಿಯಾಳ್ ತಾನ್ ಹೊನ್ನಮ್ಮ।।4।। ರಂಗ ಬರಲಿಲ್ಲೆಂದು ಎದುರು ನೋಡಲು ಬಂದು। ಹೊಸ್ತಿಲಲ್ಲಿ ಅಡ್ಡ ಬಂದು ನಿಲ್ಲಬೇಡ। ಹೊಸ್ತಿಲಲ್ಲಿ ಅಡ್ಡ ಬಂದು ನಿಲ್ಲಬೇಡ ಕಂದಯ್ಯ। ಬಂದೇ ಬರ್ತಾನ ನಮ್ಮನೆಗೆ ರಂಗ। ಬಂದೇ ಬರ್ತಾನ ನಮ್ಮನೆಗೆ ರಂಗ।।5।।

## ಭಜನೆ

**ಕಸ್ತೂರಿರಂಗ ಕಾವೇರಿರಂಗ** **ರಾಗ: ಶುದ್ಧಸಾವೇರಿ**

ಕಸ್ತೂರಿರಂಗ ಕಾವೇರಿರಂಗ। ಶ್ರೀರಂಗ ರಂಗ ರಂಗ। ಕಲ್ಯಾಣರಂಗ ಕರುಣಾಂತರಂಗ। ಶ್ರೀರಂಗ ರಂಗ ರಂಗ। ಗರುಡಗಮನರಂಗ ಶೇಷಶಯನರಂಗ। ಶ್ರೀರಂಗ ರಂಗ ರಂಗ।।

## ಆರತಿ

**ಚಿತ್ತ ಸ್ಥಾವರದಲ್ಲಿ ಮುತ್ತಿನ** **ರಾಗ:ನೀಲಾಂಬರಿ, ಛಾಪುತಾಳ**

ಚಿತ್ತ ಸ್ಥಾವರದಲ್ಲಿ ಮುತ್ತಿನ ಮಂಟಪ। ಸರ್ಪನ ಹಾಸಿಗೆಯ ತಲೆದಿಂಬ ಮಾಡಿ। ಅಚ್ಚ ಮಲ್ಲಿಗೆ ಹರವಿ ಸುತ್ತ ದೀವಿಗೆ ಇರಿಸಿ। ಕಸ್ತೂರಿರಂಗಗಾರತಿ ಎತ್ತಿರೆ।।1।। ಕಾವೇರಿ ತೀರದಿ ಹಾವಿನ ಮಂಚದಿ। ವೇದಶಾಸ್ತ್ರಗಳೆಲ್ಲ ಎಡ ಬಲದಿ। ಆಯ್ದ ಮಲ್ಲಿಗೆ ಹರವಿ ಸಾಲು ದೀವಿಗೆ ಇರಿಸಿ। ಕಾವೇರಿ ರಂಗಗಾರುತಿ ಎತ್ತಿರೆ।।2।। ಎಡದಲ್ಲಿ ಭೂದೇವಿ ಬಲದಲ್ಲಿ ಶ್ರೀದೇವಿ। ನಡುವೆ ನೀನೋಲಗದೋಳ್ ಒಪ್ಪುತಿರೆ। ಗರುಡವಾಹನವೇರಿ ಬೇಟೆಯಾಡುತ ಬರುವ। ಚೆಲುವ ಶ್ರೀಕೃಷ್ಣಗಾರುತಿ ಎತ್ತಿರೆ।।3।।

**ಧೂಪಾರತಿಯ ನೋಡುವ ಬನ್ನಿ** **ರಾಗ: ಪೂರ್ವಿಕಲ್ಯಾಣಿ, ಆದಿತಾಳ**

ಧೂಪಾರತಿಯ ನೋಡುವ ಬನ್ನಿ, ನಮ್ಮ ಗೋಪಾಲಕೃಷ್ಣ ದೇವರ ಪೂಜೆಯ।।ಪ।। ಮದ್ದಳೆ ಝಾಗಟ ತಾಳ ದಂಡಿಗೆ ಭೇರಿ। ತದ್ಧಿಮಿ ಧಿಮಿಕೆಂದು ರಭಸಗಳು। ಅದ್ಭುತ ಶಂಖ ನಾದಂಗಳಿಂದಲಿ ನಮ್ಮ। ಪದ್ಮನಾಭ ದೇವರ ದಿವ್ಯ ಪೂಜೆಯ।।1।। ಅಗರು ಚಂದನ ಧೂಪ ಗುಗ್ಗುಳ ಸಾಮ್ರಾಣಿ। ಮಘಮಘಿಸುವ ಧೂಪದಾರತಿಯು। ಮಿಗಿಲಾದ

ಏಕಾರತಿ ಭಕ್ತಿಯಲಿ ನಮ್ಮ । ಜಗನ್ನಾಥ ವಿಠಲ ದೇವರ ಪೂಜೆಯ॥2॥ ಹರಿ ಸರ್ವೋತ್ತಮನ ಭಕ್ತರಾಧಾರನ। ಪರಮ ಮಂಗಳ ಮೂರ್ತಿ ಪಾವನನ। ಪರದೈವವಾದಂಥ ಶ್ರೀರಂಗನಾಥನ ಪುರಂದರವಿಠಲನ ದೇವರ ಪೂಜೆಯ॥3॥

**ಪೊಂಗೊಳಲೂದುವ ರಂಗಗೆ** **ರಾಗ:ಬೇಹಾಗ್**

ಪೊಂಗೊಳಲೂದುವ ರಂಗಗೆ। ಮಂಗಳಾರುತಿ ತಂದು ಬೆಳಗಿರೆ॥ಪ॥ ಹಾವಿನ ಹಾಸಿಗೆ ಮೇಲೆ। ಲಕ್ಷ್ಮೀ ಸಹಿತ ಪವಡಿಸಿರಲು। ಭೃಗುಮುನಿ ಬಂದು ಭರದಿಂದೊದೆಯಲು। ಕೋಮಲ ಚರಣಕೆ ಬಂದೆರಗಿದ ಹರಿ॥1॥ ಕೋಟಿ ಸೂರ್ಯನಂತೆ ಹೊಳೆಯುವ। ಮಾಟದ ಕಿರೀಟವನಿಟ್ಟು। ಚಿಗುರು ತುಳಸಿ ವನಮಾಲೆಯನು। ಲಕ್ಷ್ಮೀಕಾಂತ ಧರಿಸಿದಾ ಹರಿ॥2॥ ಶಂಖ ಚಕ್ರಧಾರನಿಗೆ ಪಂಕಜನಾಭನಿಗೆ। ವೆಂಕಟೇಶ ವಿಠಲನಿಗೆ। ಮುತ್ತಿನಾರುತಿ ಎತ್ತಿ ಬೆಳಗಿರೇ॥3॥

**ಮಂಗಳಾರತೀ ಎತ್ತಿದರಂಗನೆಯರು** **ರಾಗ: ಖರಹರಪ್ರಿಯ**

ಮಂಗಳಾರತೀ ಎತ್ತಿದರಂಗನೆಯರು॥ಪ॥ ಗಂಗೆಯ ಪಾದದೊಳು ತಳೆದ ರಂಗನಾಥನಿಗೆ ಸಂಭ್ರಮ ದಿಂದಲೀ॥ಅ.ಪ॥ ಮುಲ್ಲೋಕಂಗಳ। ನೊಲಿದು ಪಾಲಿಸುವಗೆ। ನೀಲಮೇಘ ಶ್ಯಾಮಗೆ ಕರುಣಾಲವಾಲ ಕಮಲ ನೇತ್ರಗೆ॥1॥ ದುರಿತ ಹರನಿಗೆ। ನಿರುತ ಗರುಡಗಮನಗೇ। ಸುರಪವಿನುತ ಕಮಲನಾಭಗೆ। ಸುರಚಿರ ಗಂಭೀರ ಹರಿಗೆ ॥2॥ ಮಾಂಗಿರೀಶಗೇ ನಿತ್ಯ। ಶೃಂಗಾರಾಂಬುಧಿಗೆ। ರಂಗನಾಥನಿಗೆ ಜಗವಿಖ್ಯಾತಗೆ। ತುಂಗ ಕೃಪಾಪಾಂಗಗೇ ಜಯ॥3॥

**ಮಂಗಳಾರುತಿ ನೋಡೊ ರಂಗ** **ರಾಗ:ಬೇಹಾಗ್**

ಮಂಗಳಾರುತಿ ನೋಡೊರಂಗ। ಈ ವಿಧದಿಂದೆತ್ತುವೆ॥ಪ॥ ಮಂಗಳಾಂಗ ಶ್ರೀರಂಗನ ಗುಡಿಯಲಿ॥ ತಿಂಗಳು ಬೆಳಕಿನ ತಿಳಿರಸ ಉಕ್ಕುತ॥ಅ.ಪ.॥ ಅಷ್ಟಾದಳದೊಳುಮಧ್ಯದಲ್ಲಿ ಆದಂತ ಬೆಳಕು। ಅರಿವಿನೋದದ ಸೊಡಲನು ಇರಿಸಿ। ಸಾಧಿಸಿನೋಡಲು ಸಂಚಿತ ಬೆಳಕು। ಹಾದಿಯತೋರುವ ಆದ್ಯಂತನ ಬೆಳಕು॥1॥ ಪಂಚಾದಳದೊಳು ಮಧ್ಯದಲ್ಲಿ। ಆದಂತ ಬೆಳಕು। ಮಿಂಚು ಬಹುವಿಷಯದ। ಬತ್ತಿಯ ಹಚ್ಚಿ। ಪಂಚವರ್ಣದ ಕಳೆ ಅದರೊಳಗಿರಿಸಿ। ಪಂಚವಳಿದದ ಪರಂಜ್ಯೋತಿಯ ಬೆಳಕು॥2॥ ಆದಿಮಧ್ಯಾಂತರವಿಲ್ಲದನಂತ। ಆದಂತ ಬೆಳಕು। ಅರಿವಿನೋದದ ಸೊಡಲು ಇರಿಸಿ। ಸಾಧಿಸಿ ನೋಡಲು ನಂದನ ಬೆಳಕು। ಹಾದಿಯ ತೋರುವ ಅನಂತನ ಬೆಳಕು॥3॥

**ಮಂಗಳಾರುತೀಯನೆತ್ತಿರೆ ರಂಗನಾಥಗೆ** **ರಾಗ:ಪೂರ್ವಿಕಲ್ಯಾಣಿ**

ಮಂಗಳಾರುತೀಯನೆತ್ತಿರೆ ರಂಗನಾಥಗೆ। ಅಂಗನೇಯರು। ಸಂಘದಿಂದ। ಮಂಗಳಾಂಗಗೆ॥ಪ॥ ಕ್ಷೀರಸಾಗರ ಮಧ್ಯದಲ್ಲಿ। ಆಲದೆಲೆಯ ಮೇಲೆ ಬಾಲನಾಗಿ ಮಲಗಿ ನೀ। ಲೀಲೇತೋರ್ದನೇ॥1॥ ವಸುದೇವ ದೇವಕಿ ಉದರದಿ ಜನಿಸಿ। ಗೋಕುಲಾದಲೀ। ಶಿಶುವು ರೂಪಿನಿಂದನೀ ಲೀಲೆ ತೋರಿದೆ॥2॥ ಹದಿನಾರು ಸಾವಿರ ಸಪತ್ನಿಯರೊಡನೆ। ಗೋಕುಲಾದಲೀ ಚದುರಂಗವಾಡಿ। ಚದುರರೊಡನೆ ಸುಖದಿ ನಲಿಯುವೇ॥3॥

**ರಂಗನಾಥನ ನೋಡಿರೆ** **ರಾಗ: ಸುರುಟಿ**

ರಂಗನಾಥನ ನೋಡಿರೆ। ಜಯಮಂಗಳಾರುತಿ ಪಾಡಿರೇ॥ಪ॥ ಸಿಂಧು ಶಯನನ ನೋಡುತ ಆನಂದದಿಂದಲಿ ಪಾಡುತ್ತ। ಇಂದುವರಗಳ ಬೇಡುತ್ತ ಕೋಮಲಾಂಗಿಯರು ಪಾಡುತ್ತ॥1॥ ಭಾಮೆಯರ ಮಾತು ಲಾಲಿಸಿ ಬಾ ಸತ್ಯ ಭಾಮೆಯರ ಮಾತ ಮೋಹಿಸಿ ಕಾಮಿತಾರ್ಥವ ಸಲ್ಲಿಸಿ। ಭೋಲೋಕದೊಳಗವತಾರಿಸಿ॥2॥ ಮಾವನಳಿದವ ನೀತನೆ। ವಸುದೇವ ದೇವಕಿದಾತನೆ। ಗೋವುಗಳ ಕಾಯ್ದದಾತನೆ। ಬೃಂದಾವನ ಸುಪ್ರೀತನೆ॥3॥

## ಮಂಗಳ

**ಮಂಗಳಂಗಳ್ ಪಾಡಿ (ತಮಿಳು)** **ರಾಗ: ಆನಂದಭೈರವಿ**

ಮಂಗಳಂಗಳ್ ಪಾಡಿ ಮಹಿಂಳ್‌ದಿರುಪ್ಪೋಂವಾಡಿ। ಎಂಗುಂಪುಗಳ್ ತಂಗಿಇರು ರಂಗನಾಥರ್ ವಾಸನಡಿ॥ಪ॥ ಮಂಗೆಯರೆ ಪಾಡಿದಿನಂ ಮಹಿಂಳ್‌ಂದು ಕೊಂಡಾಡಿ ಜಯ॥1॥ ಪುಣ್ಣಿಯರ್‌ಗಳ್ ನೇಸನಡಿ ಪೊನ್ನರಂಗರ್ ವಾಸನಡಿ॥2॥

# ಶ್ರೀನಿವಾಸ ಸ್ತುತಿ

## ದೇವರನಾಮ

**ಅಭಯಗಿರಿಯ ವಾಸ ಶ್ರೀನಿವಾಸನು** **ರಾಗ: ರೇವತಿ**

ಅಭಯಗಿರಿಯ ವಾಸ ಶ್ರೀನಿವಾಸನು ನಮಗೆ। ಶುಭವೀವ ನಿರುತ ಮಂದಹಾಸನೊ॥ಪ॥ ಧೇನಿಪರ ಮನಕೆ ಚಿಂತಾಮಣಿಯೋ ಸ್ವಾಮಿ। ನೀನೇ ಗತಿ ಎಂಬರಿಗೆ ಹೊಣೆಯೊ ಸ್ವಾಮಿ॥ಅ.ಪ.॥ ಜ್ಞಾನಮಯ ಸಂದಣಿಯೋ ಪುಣ್ಯ ಕಾನನ ನಿವಾಸ। ಸುರಖಣಿಯೋ ಶರಣರಿಗೆ ವಜ್ರ ಪಂಜರನೋ ದುಷ್ಟ। ದುರುಳ ದೈತ್ಯರಿಗೆ ಝುರ್ಝುರನೋ॥1॥ ದುರಿತ ಕದಳಿಗೆ ಕುಂಜರನೋ ಸ್ವಾಮಿ। ಉರಗತಲ್ಪನಾದ ಸಿರಿವರನೋ॥ ಪರಮೇಷ್ಠಿ ಶಿವರೊಳಗಿಪ್ಪನೋ ಇಂದು। ಮರುತನ ಪೆಗಲೇರಿ ಬಪ್ಪನೋ॥2॥ ಶರಣರಿಗೊರವೀಯೆ ತಪ್ಪನೋ ನಮ್ಮ। ಸಿರಿ ವಿಜಯ ವಿಠ್ಠಲ ತಿಮ್ಮಪ್ಪನೋ॥3॥

**ಏನು ಕೌತುಕ ತೋರ್ಪೆಯೋ**

ಏನು ಕೌತುಕ ತೋರ್ಪೆಯೋ ಶ್ರೀನಿವಾಸ। ಮಾನುನಿಮಣಿ ಶರ್ವವಂದ್ಯ ವಿಠಲಳಿಗೆ ಒಲಿದು॥ಪ॥ ಕಲಿಯುಗದ ಸಜ್ಜನರ ಮಲಿನವನು। ತೊಳೆವುದಕೆ ಇಳೆಗಿಳಿದ ವೆಂಕಟನೀನು। ಸುಲಭಮೂರುತಿಯಾಗಿ ಸಿಲುಕಿ ಪೂಜೆಯನಿಲ್ಲಿ। ನಳಿನನಾಭನೆಕೊಂಬ ಸೋಜಿಗವಿದೇನೋ॥1॥ ಅಂಡಜಾಂಡದಿ ವ್ಯಾಪಿ ಹಿಂಡು ದೇವರ ಗಂಡ ಬಂಡಿ ಗೋವಳನಾಗಿ ಪಾಂಡವನ ಕಾಯ್ದ। ಮಂಡಲದೊಳಗಿಂದು ತೊಂಡರಿಂದ ಸೇವೆಗೊಂಡು ಹೊಸಪರಿ ನಿಂತೆ ಕಂಡವರಿಗೆಲ್ಲಾ॥2॥ ಗೋಪಿ ಕೌಸಲ್ಯೆಯರ ಪ್ರೀತಿ ಅತಿಶಯವಾಯ್ತೆ। ತಾಪಸಿಯರ ಅಳಲಿಕೆಯುಬೇಡವಾಯ್ತೆ। ಶ್ರೀಪತಿಯು ನೀನಾಗಿ ಸಿಲುಕಿ ಇವರಲಿ ನಿಂತು। ಆಪನ್ನಜನರ ಸಂತಾಪವನು ಪರಿಹರಿಪೆ॥3॥ ಚಂದದಿಂದ ಅಲಂಕಾರ ಅಭಿಷೇಕಗಳನ್ನೆಲ್ಲಾ। ಸೌಂದರ್ಯ ರೂಪನಿಗೆ ಮಾಡುತಿರೆ ಇವರು। ಗಂಧ ಪರಿಮಳಯುಕ್ತ ವರ್ಣತೀರ್ಥವಕೊಟ್ಟು। ಬಂದ ಭಕುತರಿಗೀವೆ ಆನಂದ ವಿಸ್ಮಯವ॥4॥ ಬೆಟ್ಟದೊಡೆಯನೆ ಸ್ವಾಮಿ ಪುಷ್ಕರಣಿ ಸನ್ನಿಹಿತ। ಸೃಷ್ಟೀಶ ನಿನ್ನ ಸಂದರುಶನವೆ ಸೌಭಾಗ್ಯ। ಎಷ್ಟು ನೋಡಿದರು ಮನ ತುಷ್ಟಿಯಾಗದು। ಎನ್ನ ಇಷ್ಟ ಮೂರುತಿ ರಮಾಕಾಂತ ವಿಠಲನೆ॥5॥

**ಚೆಲುವ ಮೂರುತಿ ಕಂಡೆ** **ರಾಗ: ಷಣ್ಮುಖಪ್ರಿಯ**

ಚೆಲುವ ಮೂರುತಿ ಕಂಡೆ ಶ್ರೀ ಕ್ಷೇತ್ರ ತಿರುಪತಿಲಿ। ಶ್ರೀನಿಧಿಯ ವೈಭೋಗ ಅನ್ಯಕ್ಷೇತ್ರದಿ ಕಾಣೆ॥ಪ॥ ವದನಾರವಿಂದ ದಲಿ ಶಾಂತಿದೇವತೆ ಕಂಡೆ। ಕಮಲನೇತ್ರದೊಳಗೆ ಸೂರ್ಯಚಂದ್ರ- ರಕಂಡೆ। ಎಲ್ಲ ಬ್ರಹ್ಮಾಂಡವನು ದೇಹದೊಳಗೆ ಕಂಡೆ। ದೇದೀಪ್ಯಮಾನ ಶ್ರೀ ತಿರುಮಲೇಶನ ಕಂಡೆ॥1॥ ದುಷ್ಟರನು ಸಂಹರಿಸೆ ವಿಷ್ಣುಚಕ್ರವ ಧರಿಸಿ। ಧರ್ಮ ಜಾಗೃತಿಗೊಳಿಸೆ ಪಾಂಚಜನ್ಯ ಧರಿಸಿ। ಭಕ್ತರನು ಉದ್ಧರಿಸೆ ವರದ ಹಸ್ತವ ನೀಡಿ। ಕೈಪಿಡಿದು ನಡೆಸುವ ಭಕ್ತವತ್ಸಲನೆ॥2॥